RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎಸ್. ಓಲೇಕಾರ | ಸಿಇಒ: ಚಂದ್ರಶೇಖರ ಎಸ್.ಕೆ. | ಸಹ ಸಂಪಾದಕರು: ಶಿವಕುಮಾರ

# ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ

ನೇರ ನಿಖರ ನಿರ್ದಿಷ್ಟ

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ವಿಶ್ವ ಹಿಂದೂ ಪರಿಷತ್, ಬಜರಂಗದಳದ ಹಿಂದೂ ಮಹಾಗಣಪತಿ ಮೂರ್ತಿ ಅದ್ದೂರಿ ಶೋಭಾಯಾತ್ರೆ 2

ಗಾಂಧೀಜಿ, ಶಾಸ್ತ್ರೀಜಿ ತತ್ವಾದರ್ಶ ದಾರಿದೀಪ 3

ಗುರುಕುಲ ಜ್ಞಾನ, ಸಂಸ್ಕಾರ ಕೊಡುವ ಕೇಂದ್ರವಾಗಿ ಬೆಳೆಯಲಿ 4

ಸಂಪುಟ (Volume): 1 ಸಂಚಿಕೆ (Issue): 191 ಪುಟ (Page): 4 ದರ Rs. 2 ಶನಿವಾರ 3 ಅಕ್ಟೋಬರ್ 2026 ● 3 OCTOBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

### ಏಷ್ಯನ್ ಗೇಮ್ಸ್‌ನಲ್ಲಿ ಇತಿಹಾಸ ಬರೆದ ಇಂಡಿಯಾ | 1–0 ದಿಂದ ಚೀನಾಗೆ ಸೋಲು

## ಚಿನ್ನಕ್ಕೆ ಮುತ್ತಿಟ್ಟ ಭಾರತದ ವನಿತೆಯರು

**ನಗೋಯಾ:** ಭಾರತ ಮಹಿಳಾ ಹಾಕಿ ತಂಡವು ಏಷ್ಯನ್ ಗೇಮ್ಸ್‌ನಲ್ಲಿ ನವ ಇತಿಹಾಸ ಬರೆದಿದೆ. ನಗೋಯಾದಲ್ಲಿ ನಡೆದ ಪ್ರಶಸ್ತಿ ಸುತ್ತಿನ ರೋಚಕ ಕದನದಲ್ಲಿ ಹಾಲಿ ಚಾಂಪಿಯನ್ ಚೀನಾ ತಂಡವನ್ನು 1–0 ಗೋಲುಗಳ ಅಂತರದಿಂದ ಮಣಿಸಿದ ಭಾರತದ ವನಿತೆಯರು, ಬರೋಬ್ಬರಿ 44 ವರ್ಷಗಳ ಬಳಿಕ ಬಂಗಾರದ ಪದಕಕ್ಕೆ ಮುತ್ತಿಕ್ಕಿದ್ದಾರೆ. ಈ ಮಹತ್ವದ ಗೆಲುವಿನೊಂದಿಗೆ ಭಾರತ ತಂಡವು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ನೇರ ಅರ್ಹತೆಯನ್ನೂ ಸಂಪಾದಿಸಿದೆ.

1982ರಲ್ಲಿ ಮೊದಲ ಬಾರಿಗೆ ಚಿನ್ನ ಗೆದ್ದಿದ್ದ ಭಾರತಕ್ಕೆ ಆ ನಂತರ ಸುವರ್ಣ ಪದಕ ಮರೀಚಿಕೆಯಾಗಿಯೇ ಉಳಿದಿತ್ತು. 1998 ಮತ್ತು 2018ರಲ್ಲಿ ಫೈನಲ್ ಪ್ರವೇಶಿಸಿದರೂ ಅನುಕ್ರಮವಾಗಿ ದಕ್ಷಿಣ ಕೊರಿಯಾ ಹಾಗೂ ಜಪಾನ್ ವಿರುದ್ಧ ಮುಗ್ಗರಿಸಿ ಬೆಳ್ಳಿಗೆ ತೃಪ್ತಿಪಡಬೇಕಾಗಿತ್ತು. ಆದರೆ, ಈ ಬಾರಿ ಯಾವುದೇ ತಪ್ಪುಗಳಿಗೆ ಆಸ್ಪದ ನೀಡದ ಭಾರತೀಯ ಪಡೆ, ಆರಂಭದಿಂದ ಅಂತ್ಯದವರೆಗೂ ಅದ್ಭುತ ಸಂಘಟಿತ ಹೋರಾಟ ನಡೆಸಿ ಚೀನಾವನ್ನು ಕಟ್ಟಿಹಾಕಿತು.

**ಲಾಲ್ರೆಮ್ಸಿಯಾಮಿ ಮಿಂಚಿನ ಗೋಲು:** ಪಂದ್ಯ ಆರಂಭವಾದ ಮೊದಲ ಐದು ನಿಮಿಷಗಳಲ್ಲಿ ಚೀನಾ ಆಟಗಾರ್ತಿಯರು ಭಾರತದ ಡಿಫೆನ್ಸ್ ಮೇಲೆ ತೀವ್ರ ಒತ್ತಡ ಹೇರಿದರು. ಆದರೆ, ಈ ಒತ್ತಡವನ್ನು ಯಶಸ್ವಿಯಾಗಿ ಮೆಟ್ಟಿ ನಿಂತ ಭಾರತ, 10ನೇ ನಿಮಿಷದಲ್ಲಿ ತಿರುಗೇಟು ನೀಡಿತು. ಚುರುಕಿನ ಪಾಸ್ ಮೂಲಕ ಚೆಂಡನ್ನು ನಿಯಂತ್ರಣಕ್ಕೆ ಪಡೆದ ಲಾಲ್ರೆಮ್ಸಿಯಾಮಿ, ಅತ್ಯಾಕರ್ಷಕ 'ರಿವರ್ಸ್ ಹಿಟ್' ಮೂಲಕ ಚೆಂಡನ್ನು ನೆಟ್‌ನ ಮೇಲ್ಭಾಗಕ್ಕೆ ಬಾರಿಸಿ ಭಾರತಕ್ಕೆ 1–0 ಮುನ್ನಡೆ ತಂದುಕೊಟ್ಟರು.

**ಗೋಡೆಯಂತೆ ನಿಂತ ನಾಯಕಿ ಸವಿತಾ ಪೂನಿಯಾ:** ಎರಡನೇ ಕ್ವಾರ್ಟರ್‌ನಲ್ಲಿ ಸಮಬಲ ಸಾಧಿಸಲು ಚೀನಾ ಇನ್ನಿಲ್ಲದ ಪ್ರಯತ್ನ ನಡೆಸಿತು. ಈ ವೇಳೆ ಚೀನಾಕ್ಕೆ ಲಭಿಸಿದ ಪೆನಾಲ್ಟಿ ಸ್ಟ್ರೋಕ್ ಭಾರತೀಯ ಪಾಳಯದಲ್ಲಿ ತಲ್ಲಣ




ಮೂಡಿಸಿತ್ತು. ಆದರೆ ಭಾರತದ ಗೋಲ್‌ಕೀಪರ್ ಸವಿತಾ ಪೂನಿಯಾ ಎದುರಾಳಿ ಆಟಗಾರ್ತಿ ಜಾಂಗ್ ಯಿಂಗ್ ಅವರ ಲೆಕ್ಕಾಚಾರವನ್ನು ಅದ್ಭುತವಾಗಿ ಗ್ರಹಿಸಿದರು. ಎಡಭಾಗಕ್ಕೆ ಡೈವ್ ಹೊಡೆದು ಒಂದೇ ಕೈಯಲ್ಲಿ ಚೆಂಡನ್ನು ತಡೆದ ಸವಿತಾ, ಭಾರತದ ಹಿನ್ನಡೆಯನ್ನು ತಪ್ಪಿಸಿ ಪಂದ್ಯದ ಹೀರೊ ಎನಿಸಿಕೊಂಡರು.

ದ್ವಿತೀಯಾರ್ಧದಲ್ಲೂ ಚೀನಾ ಭಾರತದ ಸರ್ಕಲ್ ಒಳಗೆ ನಿರಂತರವಾಗಿ ದಾಳಿ ನಡೆಸಿದರೂ, ಭಾರತದ ಉಕ್ಕಿನಂಥ ರಕ್ಷಣಾ ಪಡೆಯನ್ನು ಬೇಧಿಸಲು ಸಾಧ್ಯವಾಗಲಿಲ್ಲ. ಅಂತಿಮ ಕ್ಷಣದವರೆಗೂ ಏಕಾಗ್ರತೆ ಕಾಯ್ದುಕೊಂಡ ಭಾರತದ ವನಿತೆಯರು, ಅಂಪೈರ್‌ನಿಂದ ಅಂತಿಮ ಶಿಳ್ಳೆ ಮೊಳಗುತ್ತಿದ್ದಂತೆ ಸಂಭ್ರಮದ ಕಡಲಲ್ಲಿ ತೇಲಿದರು. ಈ ಸುವರ್ಣ ಗೆಲುವು ಭಾರತೀಯ ಕ್ರೀಡಾ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಕ್ಷಣಕ್ಕೆ ಸಾಕ್ಷಿಯಾಯಿತು.

## ಅಭಿಜಿತ್ ದಿಪ್ಕೆ ಗೋ ಬ್ಯಾಕ್...

**ಮುಂಬೈ:** ಎಲ್ಲಾ ತರಹದ ಅಭಿಪ್ರಾಯಗಳನ್ನು ಗೌರವಿಸುವುದು ಪ್ರಜಾಪ್ರಭುತ್ವದ ಮೂಲ ಗುಣ. ವೈಚಾರಿಕ ಭಿನ್ನಾಭಿಪ್ರಾಯಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಾನವಿದೆ. ಒಂದು ಅಭಿಪ್ರಾಯವನ್ನು ಒಪ್ಪುವ ಜನರ ಸಮೂಹಕ್ಕೆ ಪ್ರತಿಭಟನೆ ಮಾಡುವ ಹಕ್ಕಿದ್ದರೆ, ಆ ಅಭಿಪ್ರಾಯವನ್ನು ವಿರೋಧಿಸುವ ಬೇರೊಂದು ಗುಂಪಿಗೆ, ಆ ಪ್ರತಿಭಟನೆಯನ್ನು ವಿರೋಧಿಸುವ ಹಕ್ಕಿದೆ.

ಅದರಂತೆ ಎಸ್‌ಐಆರ್ ಅಕ್ರಮಗಳ ಆರೋಪಗಳ ಹಿನ್ನೆಲೆಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿ, ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಮಹಾರಾಷ್ಟ್ರ ರಾಜಧಾನಿ ಮುಂಬೈನಲ್ಲಿ ಇಂದು (ಅ.2–ಶುಕ್ರವಾರ) ಬೃಹತ್ ಪ್ರತಿಭಟನೆ ನಡೆಸಿದೆ. ನಗರದ ಶಿವಾಜಿ ಪಾರ್ಕ್‌ನಲ್ಲಿ ಸಿಜೆಪಿ ಸಂಸ್ಥಾಪಕ ಅಭಿಜಿತ್ ದಿಪ್ಕೆ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗಿದೆ.

ಜ್ಞಾನೇಶ್ ಕುಮಾರ್ ಅವರನ್ನು ದೇಶದ್ರೋಹಿ ಎಂದಿದ್ದ ಅಭಿಜಿತ್ ದಿಪ್ಕೆ, ಶಿವಾಜಿ ಪಾರ್ಕ್‌ನಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಭರ್ಜರಿ ಭಾಷಣ ಮಾಡಿದರು. ಆದರೆ ಈ ಪ್ರತಿಭಟನೆಗಳಿಗೆ ಪರ್ಯಾಯವಾಗಿ, ಅದೇ ಶಿವಾಜಿ ಪಾರ್ಕ್‌ನಲ್ಲಿ ಸಿಜೆಪಿ ವಿರೋಧಿ ಗುಂಪು ಕೂಡ ಪ್ರತಿಭಟನೆ ನಡೆಸಿದೆ. ಕೈಯಲ್ಲಿ "ಅಭಿಜಿತ್ ದಿಪ್ಕೆ ಗೋ ಬ್ಯಾಕ್" ಫಲಕಗಳನ್ನು ಹಿಡಿದಿದ್ದ ವಿರೋಧಿ ಗುಂಪು, ಸಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ತೀವ್ರವಾಗಿ ವಿರೋಧಿಸಿತು. ಪ್ರತಿಭಟನಕಾರರು ಅಭಿಜಿತ್ ದಿಪ್ಕೆ ವಿರುದ್ಧ ಯುವಕರನ್ನು ದಾರಿ ತಪ್ಪಿಸುತ್ತಿರುವ ಗಂಭೀರ ಆರೋಪ ಕೂಡ ಮಾಡಿದರು.

**ಅಭಿಜಿತ್ ದಿಪ್ಕೆ ಭಾಷಣ:** ಇದಕ್ಕೂ ಮುನ್ನ ಶಿವಾಜಿ ಪಾರ್ಕ್‌ನಲ್ಲಿ ನೆರೆದಿದ್ದ ಸಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅಭಿಜಿತ್ ದಿಪ್ಕೆ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. "ಜ್ಞಾನೇಶ್ ಕುಮಾರ್ ಅವರು ಎಸ್‌ಐಆರ್ ಪ್ರಕ್ರಿಯೆ ಮೂಲಕ ಪ್ರಜಾಪ್ರಭುತ್ವದ ವಿನಾಶಕ್ಕೆ ಮುನ್ನುಡಿ ಬರೆದಿದ್ದು, ಅವರು ರಾಜೀನಾಮೆ ನೀಡುವವರೆಗೂ ನಮ್ಮ ಹೋರಾಟ ಮುಂದುವರೆಯಲಿದೆ" ಎಂದು ಸಿಜೆಪಿ ಸಂಸ್ಥಾಪಕ ಗುಡುಗಿದರು.

"ಮಹಾತ್ಮಾ ಗಾಂಧಿ ಈ ದೇಶದ ಆತ್ಮವಾದರೆ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಈ ದೇಶದ ಬೆನ್ನೆಲುಬು. ಇವರಿಬ್ಬರ ಆದರ್ಶಗಳ ನೆಲೆಗಟ್ಟಿನ ಮೇಲೆ ಸಿಜೆಪಿ ಸ್ಥಾಪನೆಯಾಗಿದ್ದು, ಪ್ರಜಾಪ್ರಭುತ್ವದ ಉಳಿವಿಗಾಗಿ ಹೋರಾಟ ಮಾಡಲಿದೆ. ಎಸ್‌ಐಆರ್ ಅಕ್ರಮಗಳಿಗೆ ನೈತಿಕ ಹೊಣೆಹೊತ್ತು, ಜ್ಞಾನೇಶ್ ಕುಮಾರ್ ಮುಖ್ಯ ಚುನಾವಣಾ ಆಯುಕ್ತರ ಸ್ಥಾನಕ್ಕೆ ರಾಜೀನಾಮೆ ನೀಡಲೇಬೇಕು" ಎಂದು ಅಭಿಜಿತ್ ದಿಪ್ಕೆ ಒತ್ತಾಯಿಸಿದರು.

ಮುಂಬೈನ ಐತಿಹಾಸಿಕ ಶಿವಾಜಿ ಪಾರ್ಕ್‌ನಲ್ಲಿ ಸುಮಾರು 10 ಸಾವಿರ ಸಿಜೆಪಿ ಕಾರ್ಯಕರ್ತರು ಸೇರಿದ್ದು, ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನೇತೃತ್ವದ ಮಹಾರಾಷ್ಟ್ರ ರಾಜ್ಯ ಸರ್ಕಾರಕ್ಕೆ ತಾಕತ್ತಿದ್ದರೆ ಇವರನ್ನೆಲ್ಲಾ ಬಂಧಿಸುವಂತೆ, ಅಭಿಜಿತ್ ದಿಪ್ಕೆ ಇದೇ ವೇಳೆ ಸವಾಲು ಹಾಕಿದರು. ಇದೇ ವೇಳೆ ಸಿಜೆಪಿ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿ, ಹಲವು ಬಾಲಿವುಡ್ ಸೆಲೆಬ್ರಿಟಿಗಳು ಕೂಡ ಶಿವಾಜಿ ಪಾರ್ಕ್‌ಗೆ ಭೇಟಿ ನೀಡಿದ್ದರು.

ಆದರೆ ಇದಕ್ಕೆ ವ್ಯತಿರಿಕ್ತವಾಗಿ ಮುಂಬೈನಲ್ಲಿ ಅಭಿಜಿತ್ ದಿಪ್ಕೆ ವಿರುದ್ಧ ಪ್ರತಿಭಟನೆ ನಡೆದಿದ್ದು, ಸಿಜೆಪಿ ವಿರೋಧಿ ಗುಂಪಿ ಭಾರೀ ಘೋಷಣೆಗಳನ್ನು ಕೂಗಿದೆ.



## ಖರೀದಿ ವೆಚ್ಚ 86, ಎಂಆರ್‌ಪಿ 4,528 ರೂ: ಔಷಧ ಕಂಪನಿಗಳ ಹಗಲು ದರೋಡೆ

**ಬೆಂಗಳೂರು:** ಆಹಾರ ಭದ್ರತೆ ಮತ್ತು ಗುಣಮಟ್ಟ ಇಲಾಖೆಯ ಅಧಿಕಾರಿಗಳು ನಡೆಸಿದ ತಪಾಸಣೆಯ ವೇಳೆ, ಆಘಾತಕಾರಿ ಅಂಶವೊಂದು ಬಯಲಿಗೆ ಬಂದಿದೆ. ಔಷಧಿ ತಯಾರಿಕಾ ಸಂಸ್ಥೆಗಳ ಖರೀದಿ ವೆಚ್ಚ (Landing Cost) ಮತ್ತು ಗರಿಷ್ಠ ಚಿಲ್ಲರೆ ಬೆಲೆ (MRP) ನಡುವೆ ಊಹಿಸಲೂ ಅಸಾಧ್ಯವಾದ ವ್ಯತ್ಯಾಸ ಇರುವುದು ಕಂಡು ಬಂದಿದೆ.



ಈ ಬಗ್ಗೆ ಖುದ್ದು ಟ್ವೀಟ್ ಮಾಡಿರುವ ರಾಜ್ಯ ಆರೋಗ್ಯ ಸಚಿವ ಯುಟಿ ಖಾದರ್, "ಕೆಲವು ಪ್ರಕರಣಗಳಲ್ಲಿ ಒಬಿಕಯು ಖರೀದಿ ವೆಚ್ಚಕ್ಕಿಂತ 52 ಪಟ್ಟು ಹೆಚ್ಚಿದೆ. ಇಂತಹ ವ್ಯತ್ಯಾಸಗಳನ್ನು ಗಂಭೀರವಾಗಿ ಪರಿಶೀಲಿಸಬೇಕಿದೆ ಮತ್ತು ಕೇಂದ್ರ ಸರ್ಕಾರ, ಈ ಸಂಬಂಧ ಇರುವ ಕಾಯಿದೆಯಲ್ಲಿ ತಿದ್ದುಪಡಿಯನ್ನು ತರಲು ನಾವು ಒತ್ತಾಯಿಸುತ್ತಿದ್ದೇವೆ" ಎಂದು ಹೇಳಿದ್ದಾರೆ.

ಕೇಂದ್ರ ಆರೋಗ್ಯ ಸಚಿವರಿಗೆ ಯುಟಿ ಖಾದರ್ ಪತ್ರ

ರೋಗಿಗಳನ್ನು ಮತ್ತು ಅವರ ಕುಟುಂಬವನ್ನು ಅನಗತ್ಯ ಆರ್ಥಿಕ ಹೊರೆಯಿಂದ ರಕ್ಷಿಸಬೇಕಿದೆ. ಖರೀದಿ ವೆಚ್ಚ, ಒಬಿಕ, ರೋಗಿಗಳ ಬಿಲ್ಲಿಂಗ್ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ನಮ್ಮ ಉದ್ದೇಶ ಸ್ಪಷ್ಟವಾಗಿದೆ. ಕೇಂದ್ರ ಸರ್ಕಾರದ ತುರ್ತು ಮಧ್ಯಪ್ರವೇಶದ ಅಗತ್ಯ ಇಲ್ಲಿ ಎದ್ದು ಕಾಣುತ್ತಿದೆ. ಈ ಸಂಬಂಧ, ಕೇಂದ್ರ ಆರೋಗ್ಯ ಸಚಿವ ಜೆಪಿ ನಡ್ಡಾಗೆ ಪತ್ರವನ್ನು ಬರೆದಿದ್ದೇನೆ ಎಂದು ಆರೋಗ್ಯ ಸಚಿವ ಯುಟಿ ಖಾದರ್ ಹೇಳಿದ್ದಾರೆ.

**ಜೆಪಿ ನಡ್ಡಾಗೆ ಯುಟಿ ಖಾದರ್ ಬರೆದ ಪತ್ರದಲ್ಲಿ ಏನಿದೆ?:** ರಾಜ್ಯ ಆರೋಗ್ಯ ಇಲಾಖೆ ಬೆಲೆಯಲ್ಲಿ ತೀವ್ರ ವ್ಯತ್ಯಾಸವಿರುವ 253 ಔಷಧಿಗಳನ್ನು ಗುರುತಿಸಿದೆ. 768ಕ್ಕೂ ಹೆಚ್ಚು ವೈದ್ಯಕೀಯ ಉಪಕರಣಗಳ ಪರಿಶೀಲನೆ ನಡೆಸಲಾಗುತ್ತಿದೆ. ಸೂಕ್ತ ಕ್ರಮಕ್ಕಾಗಿ ಕೇಂದ್ರಕ್ಕೆ ಪತ್ರವನ್ನು ಬರೆದು, ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲು, ಸಚಿವಾಲಯ ಆಗ್ರಹಿಸಿದೆ.

ರೋಗಿಗಳ ಬಿಲ್‌ನಲ್ಲಿ ಲ್ಯಾಂಡಿಂಗ್ ಕಾಸ್ಟ್ ಮತ್ತು MRP ಅನ್ನು ಕಡ್ಡಾಯವಾಗಿ ನಮೂದಿಸಬೇಕು.

DPCO (Drug Price Control Order) ಬೆಲೆ ನಿಯಂತ್ರಣದ ಅಡಿಗೆ ಔಷಧಿಗಳ ವ್ಯಾಪ್ತಿಯನ್ನು ವಿಸ್ತರಿಸುವುದು.

ಅತಿ ಅಗತ್ಯದ ಮೆಡಿಸಿನ್, ದುಬಾರಿ ಔಷಧಿ ಮತ್ತು ವೈದ್ಯಕೀಯ ಉಪಕರಣಗಳ ಮೇಲಿನ ವ್ಯಾಪಾರ ಲಾಭಾಂಶವನ್ನು (Margin) ನಿಯಂತ್ರಿಸಿ, ವೈಜ್ಞಾನಿಕವಾಗಿ ನಿಗದಿ ಪಡಿಸುವುದು.

ಅಂತರ್ ಸಚಿವಾಲಯಗಳ ಎಕ್ಸ್‌ಪರ್ಟ್‌'ಗಳ ತಂಡವನ್ನು ರಚಿಸಿ, ರಾಷ್ಟ್ರೀಯ ಡೇಟಾ ಅಧ್ಯಯನ ನಡೆಸುವುದು. ಅಗತ್ಯ ಬಿದ್ದಲ್ಲಿ ಔಷಧಗಳ (ಬೆಲೆ ನಿಯಂತ್ರಣ) ಆದೇಶ 2013ಕ್ಕೆ ತಿದ್ದುಪಡಿಯನ್ನು ತರುವುದು. ಅತ್ಯಗತ್ಯ ಔಷಧಗಳ ರಾಷ್ಟ್ರೀಯ ಪಟ್ಟಿಯಲ್ಲಿ ಇನ್ನಷ್ಟು ತುರ್ತು ಮೆಡಿಸಿನ್'ಗಳನ್ನು ಸೇರಿಸುವುದು.

ಆಡಿಟ್, ಮೇಲ್ವಿಚಾರಣೆ ವ್ಯವಸ್ಥೆಯನ್ನು ಆರಂಭಿಸುವುದು.

**ಔಷಧ ಸಂಸ್ಥೆಗಳ ಹಗಲು ದರೋಡೆಯ ಸ್ಯಾಂಪಲ್ ಕೆಲವೊಂದು ಇಲ್ಲಿದೆ:** ಜೀವ ರಕ್ಷಕ ಮೆಡಿಸಿನ್ ಅಥವಾ ಉಪಕರಣಗಳು, ರೋಗಿಗಳ ಕುಟುಂಬಗಳ ಮೇಲೆ ಆರ್ಥಿಕ ಹೊರೆಯಾಗಲು ಸಾಧ್ಯವಿಲ್ಲ. ರೋಗಿಗಳನ್ನು ರಕ್ಷಿಸಲು, ನ್ಯಾಯಯುತ ಬೆಲೆ ಖಚಿತ ಪಡಿಸಿಕೊಳ್ಳಲು, ಕರ್ನಾಟಕ ಸರ್ಕಾರ ಬದ್ಧವಾಗಿದೆ. ಇದ್ದಕ್ಕೆ ಸಂಬಂಧಿಸಿದಂತೆ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಸಚಿವರು ಹೇಳಿದ್ದಾರೆ.

## ಮತಗಳ್ಳತನದ ಪಿತಾಮಹರು ತಾವೆಂದು ಒಪ್ಪಿಕೊಂಡಿದ್ದಕ್ಕೆ ಅಭಿನಂದನೆ: ಸಿಎಂ ಡಿಕೆ ಶಿವಕುಮಾರ ಕೌಂಟರ್

ಬೆಂಗಳೂರು: 'ಮತಗಳ್ಳತನದ ಪಿತಾಮಹರು ತಾವೆಂದು ಒಪ್ಪಿಕೊಂಡಿದ್ದಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಹಾಗೂ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಸಿಎಂ ಡಿಕೆ ಶಿವಕುಮಾರ್ ಅವರು ಕೌಂಟರ್ ನೀಡಿದ್ದಾರೆ. ಬೆಂಗಳೂರಿನಲ್ಲಿ ಶುಕ್ರವಾರ ಮಾತನಾಡಿದ ಅವರು, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.



"ವಿಶೇಷ ಅಭಿಯಾನದ ಮೂಲಕ ಎಸ್ ಐಆರ್ ನಂತರದ ಗೈರು, ಸ್ಥಳಾಂತರ, ಮೃತ ಹಾಗೂ ನಕಲಿ (ASDD) ಮತ್ತಿತರ ಮತದಾರರ ಪಟ್ಟಿ ಮರುಪರಿಶೀಲನೆ ಹಾಗೂ ಮತದಾರರ ಪಟ್ಟಿ ಮರುಪರಿಶೀಲಿಸಿ, ಹೆಸರು ಬಿಟ್ಟು ಹೋದ ಅರ್ಹ ಮತದಾರರ ಹೆಸರನ್ನು ಮತ್ತೆ ಸೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಭಾರತ ಚುನಾವಣಾ ಆಯೋಗ ಎಲ್ಲ ರಾಜ್ಯಗಳ ಚುನಾವಣೆ ಅಧಿಕಾರಿಗಳಿಗೆ ಆದೇಶ ಕೊಟ್ಟಿರುವುದು ಇಡೀ ದೇಶದ ಮತದಾರರ ಹಕ್ಕಿಗೆ ಸಂದ ಜಯ" ಎಂದರು.

ವಿಧಾನಸೌಧದ ಬಳಿ ಮಾಧ್ಯಮಗಳಿಗೆ ಶುಕ್ರವಾರ ಅವರು ಪ್ರತಿಕ್ರಿಯೆ ನೀಡಿ, "ನಾವು ನಿನ್ನೆ ರಾಜ್ಯ ಚುನಾವಣಾ ಆಯೋಗದ ಎದಿರು ಧರಣಿ ನಡೆಸಿದ ಪರಿಣಾಮವಾಗಿ ಕೇಂದ್ರ ಚುನಾವಣೆ ಆಯೋಗವು ರಾತ್ರೋ ರಾತ್ರಿ ಹೊರಡಿಸಿರುವ ಈ ಆದೇಶವನ್ನು ನಾವು ಸ್ವಾಗತಿಸುತ್ತೇವೆ. ಇದು ನಮ್ಮ ಕಾಂಗ್ರೆಸ್ ಪಕ್ಷ ಮತ್ತು ಸರಕಾರದ ಗೆಲುವು ಮಾತ್ರವಲ್ಲ. ಇದು ಕರ್ನಾಟಕದ ಮತ್ತು ಇಡೀ ದೇಶದ ಮತದಾರರ ಗೆಲುವು. ಅರ್ಹ ಮತದಾರರ ಹಕ್ಕು ಕಸಿಯುವ ಸಂಚಿನ ವಿರುದ್ಧದ ಗೆಲುವು. ಮತದಾರರ ಹಕ್ಕು ರಕ್ಷಣೆಗೆ ಕಾಂಗ್ರೆಸ್ ಪಕ್ಷ ಮೊದಲಿಂದಲೂ ಹೋರಾಟ ಮಾಡುತ್ತಾ ಬಂದಿದೆ. ಅದು ಮುಂದೆಯೂ ಮುಂದುವರೆಯಲಿದೆ" ಎಂದು ಹೇಳಿದರು.

"ನಾವು ಚುನಾವಣಾ ಆಯೋಗದ ಬಳಿ ಗುರುವಾರ ನಡೆಸಿದ ಪ್ರತಿಭಟನೆ ಫಲವಾಗಿ ಕೇಂದ್ರ ಚುನಾವಣೆ ಆಯೋಗ ಎಲ್ಲ ರಾಜ್ಯಗಳ ಚುನಾವಣಾ ಆಯೋಗದ ಮುಖ್ಯಸ್ಥರಿಗೆ ಸೂಚನೆ ಕೊಟ್ಟಿದೆ. ಸಾಮೂಹಿಕವಾಗಿ ಹೆಸರು ತೆಗೆದು ಹಾಕಿರುವ ದೂರುಗಳ ಬಗ್ಗೆಯೂ ಗಮನ ಹರಿಸಬೇಕು ಎಂದು ಆದೇಶ ನೀಡಿದೆ" ಎಂದು ತಿಳಿಸಿದರು.

"ಫಾರ್ಮ್ 7 ರ ಮೂಲಕ ಯಾವುದೇ ಮತವನ್ನು ಡಿಲೀಟ್ ಮಾಡಬಾರದು ಎಂದು ತಿಳಿಸಿದ್ದಾರೆ. ಮೊದಲ ಬಾರಿಗೆ ಮತದಾರರಾಗುವ ಯುವಕರ ಹೆಸರು ಸೇರ್ಪಡೆಗೆ ವಿಶೇಷ ಶಿಬಿರಗಳನ್ನು ಆಯೋಜಿಸಬೇಕು. ಅದರಂತೆ ಮುಖ್ಯ ಚುನಾವಣಾಧಿಕಾರಿಗಳು, ಜಿಲ್ಲಾ ಚುನಾವಣಾಧಿಕಾರಿಗಳು ಇವುಗಳನ್ನು ಖಚಿತಪಡಿಸಿಕೊಳ್ಳಲು ಆದೇಶಿಸಲಾಗಿದೆ. ಬಿಎಲ್ ಒ (ಃಐಔ) ಏನು ಮಾಡಬೇಕು, ಫಾರ್ಮ್ 6 ಮತ್ತು ಫಾರ್ಮ್ 7 ಹೇಗೆ ಮಾಡಬೇಕು ಎಂಬ ಸಂಪೂರ್ಣ ಮಾಹಿತಿಯನ್ನು ನೀಡಿದ್ದಾರೆ" ಎಂದು ವಿವರಿಸಿದರು.

"ಅರ್ಜಿಗಳ ಸಲ್ಲಿಕೆಗೆ ಅನುಕೂಲವಾಗುವಂತೆ ಬೂತ್ ಮಟ್ಟದ ಶಿಬಿರಗಳನ್ನು ಆಯೋಜಿಸಬೇಕು. ರಾತ್ರಿ ಆಶ್ರಯ ತಾಣಗಳಲ್ಲಿ ವಾಸಿಸುವ ಜನರು, ಕಾರ್ಮಿಕರು ಹಾಗೂ ನಿರಾಶ್ರಿತರಿಗಾಗಿ ವಿಶೇಷ ಶಿಬಿರಗಳನ್ನು ಆಯೋಜಿಸಬೇಕು ಎಂದು ಸೂಚಿಸಿದ್ದಾರೆ" ಎಂದು ಮಾಹಿತಿ ನೀಡಿದರು.

## ನಿರೂಪಕಿ ಜಾಹ್ನವಿಗೆ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಹುದ್ದೆ

**ಬೆಂಗಳೂರು:** ನಿರೂಪಕಿ ಜಾಹ್ನವಿ ಅವರಿಗೆ ಜೆಡಿಎಸ್ ಪಕ್ಷದ ಉನ್ನತ ಹುದ್ದೆಯನ್ನು ನೀಡಲಾಗಿದೆ. ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಇತ್ತೀಚೆಗಷ್ಟೇ ಪಕ್ಷ ಸೇರ್ಪಡೆಯಾಗಿದ್ದ ಇವರು ಬಿಡದಿ ರೈತರ ಹೋರಾಟದಲ್ಲಿ ಮುಂಚೂಣಿಯಿಂದ ಭಾಗವಹಿಸಿದ್ದು, ಸದ್ಯ ಅವರಿಗೆ ಪಕ್ಷ ಹೊಸ ಜವಾಬ್ದಾರಿ ನೀಡಿದೆ.



ಪಕ್ಷದ ಕೇಂದ್ರ ಕಚೇರಿಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ, ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು ಜಾಹ್ನವಿ ಅವರಿಗೆ ನೇಮಕಾತಿ ಪತ್ರವನ್ನು ನೀಡಿದರು. ಸಚಿವರ ಕಾಲಿಗೆ ನಮಸ್ಕರಿಸಿ ಪತ್ರವನ್ನು ಪಡೆದುಕೊಂಡರು. ಇದೇ ಸಂದರ್ಭದಲ್ಲಿ ಸಚಿವರು ಪಕ್ಷ ಸಂಘಟನೆಯ ಬಗ್ಗೆ ಸಲಹೆ ನೀಡಿದರು.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿರುವ ಜಾಹ್ನವಿಯವರು, "ದೃಶ್ಯ ಮಾಧ್ಯಮ ಪತ್ರಿಕೋದ್ಯಮದ ಮೂಲಕ ನ್ಯೂಸ್ ಆಂಕರ್ ಆಗಿ ಆರಂಭವಾದ ನನ್ನ ಬದುಕಿನ ಯಾತ್ರೆ ಈಗ ಜಾತ್ಯತೀತ ಜನತಾ ದಳದ ಸಕ್ರಿಯ ಕಾರ್ಯಕರ್ತೆ ಆಗುವ ತನಕ ಬಂದು ನಿಂತಿದೆ. ಈ ಬೆಳವಣಿಗೆಯಲ್ಲಿ ತಾವುಗಳು ನೀಡಿದ ಸಹಕಾರ, ಬೆಂಬಲ, ತೋರಿದ ಪ್ರೀತಿ ವಿಶ್ವಾಸ ಬೆಲೆ ಕಟ್ಟಲಾಗದು. ಇದೀಗ ಕೇಂದ್ರ ಸಚಿವರೂ, ಜಾತ್ಯತೀತ ಜನತಾದಳ ರಾಜ್ಯಾಧ್ಯಕ್ಷರೂ ಆಗಿರುವ ಎಚ್‌ಡಿ ಕುಮಾರಸ್ವಾಮಿ ಅಣ್ಣನವರು ನನ್ನನ್ನು ಜಾತ್ಯತೀತ ಜನತಾದಳದ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಿ ಆದೇಶ ನೀಡಿದ್ದಾರೆ. ಅವರಿಂದಲೇ ನಾನು ಈ ನೇಮಕದ ಆದೇಶ ಪತ್ರ ಪಡೆದಿದ್ದೇನೆ " ಎಂದು ಬರೆದುಕೊಂಡಿದ್ದಾರೆ.

**ಹೊಸತಿರುವಿನಕ್ಷಣ:** "ವ್ಯಕ್ತಿಗತವಾಗಿ ನನ್ನ ಪಾಲಿಗೆ ಇದೊಂದು ಸಂತಸದ, ಹೊಸ ತಿರುವಿನ ಕ್ಷಣವಾಗಿದ್ದು, ಈ ಸಂಭ್ರಮವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ನಮ್ಮ ಸರ್ವೋಚ್ಚ ನಾಯಕರಾದ ಮಾಜಿ ಪ್ರಧಾನಿ ದೇವೇಗೌಡರಿಗೆ, ನಮ್ಮೆಲ್ಲರ ಆದರ್ಶಪ್ರಾಯರಾದ ಎಚ್‌ಡಿ ಕುಮಾರಸ್ವಾಮಿ ಅವರಿಗೆ ಈ ಸಂದರ್ಭದಲ್ಲಿ ಅಪಾರ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಪಕ್ಷ ಸಂಘಟನೆ ಮಾಡುವಲ್ಲಿ ಮುನ್ನುಗ್ಗುತ್ತಿರುವ, ರಾಜ್ಯ ಪ್ರವಾಸ ಕೈಗೊಂಡು ಪಕ್ಷ ಬಲಪಡಿಸುತ್ತಿರುವ ಯುವ ನಾಯಕ ನಿಖಿಲ್ ಕುಮಾರಸ್ವಾಮಿ, ಪಕ್ಷದ ಗ್ರೇಟರ್ ಬೆಂಗಳೂರು ಅಧ್ಯಕ್ಷ ರಮೇಶ್ ಗೌಡ ಅವರಿಗೂ ಕೃತಜ್ಞನಾಗಿದ್ದೇನೆ" ಎಂದಿದ್ದಾರೆ.

## ಚಿನ್ನ ಕಳ್ಳಸಾಗಣೆ ಪ್ರಕರಣ, ನಟಿ ರನ್ಯಾ ರಾವ್‌ಗೆ 89 ಕೋಟಿ ದಂಡ

**ಬೆಂಗಳೂರು:** ಬಹುಕೋಟಿ ರೂ. ಚಿನ್ನ ಕಳ್ಳಸಾಗಣೆ ಪ್ರಕರಣದ ಆರೋಪಿಯಾಗಿರುವ ಚಿತ್ರನಟಿ ಹರ್ಷವರ್ಧಿನಿ ಅಲಿಯಾಸ್ ರನ್ಯಾ ರಾವ್‌ಗೆ ಕಸ್ಟಮ್ಸ್ ಇಲಾಖೆಯು ಬರೋಬ್ಬರಿ 89 ಕೋಟಿ ರೂ. ದಂಡ ವಿಧಿಸಿದೆ.



ರನ್ಯಾ ರಾವ್ ಸಹ ಆರೋಪಿಗಳ ಜೊತೆ ಸೇರಿ ದುಬೈನಿಂದ ಭಾರತಕ್ಕೆ 2024ರ ಮಾ.7ರಿಂದ 2025ರ ಫೆ.18ರವರೆಗೆ ಅಕ್ರಮವಾಗಿ ಚಿನ್ನ ಸಾಗಾಟ ಮಾಡಿರುವುದನ್ನು ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಪತ್ತೆ ಹಚ್ಚಿ, ರನ್ಯಾ ರಾವ್, ತರುಣ್ ಕೊಂಡರಾಜು, ಸಾಹಿಲ್ ಜೈನ್ ಹಾಗೂ ಭರತ್‌ಕುಮಾರ್ ಜೈನ್ ಎಂಬುವರನ್ನು ಬಂಧಿಸಿತ್ತು.

**ಚಿನ್ನ ಕಳ್ಳಸಾಗಣೆ ಮಾಡಿದ ನಟಿ ರನ್ಯಾರಾವ್‌ಗೆ 89 ಕೋಟಿ ದಂಡ:** ಗುಂಪುಗೂಡಿ ಚಿನ್ನದ ಕಳ್ಳಸಾಗಣೆ ಜಾಲದಲ್ಲಿ ಸಕ್ರಿಯವಾಗಿದ್ದ ಸಂಗತಿ ಸಾಕ್ಷ್ಯಾಧಾರಗಳ ಸಮೇತ ದೃಢಪಟ್ಟಿದೆ. ಒಂದು ವರ್ಷದ ಅವಧಿಯಲ್ಲಿ 113 ಕೆ.ಜಿ. ಚಿನ್ನ ಸಾಗಾಟ ಮಾಡಿದ್ದರು. ಹೀಗಾಗಿ, ಕಸ್ಟಮ್ಸ್ ಕಾಯಿದೆ–1962ರ ಅನುಸಾರ ರನ್ಯಾ ರಾವ್ 89 ಕೋಟಿ ರೂ. ದಂಡ ಪಾವತಿಸಬೇಕೆಂದು ಕಸ್ಟಮ್ಸ್ ಇಲಾಖೆ ಜಂಟಿ ನಿರ್ದೇಶಕ ಡಾ.ಸಂದೀಪ್ ಗುಂಜಾಲ್ ಆದೇಶಿಸಿದ್ದಾರೆ.

**ಪ್ರಕರಣದ ಇತರೆ ಆರೋಪಿಗಳಿಗೂ ದಂಡ:** ಪ್ರಕರಣ ಸಂಬಂಧ 399 ಪುಟಗಳ ವಿಸ್ತೃತ ಆದೇಶ ಹೊರಡಿಸಿರುವ ಸಂದೀಪ್ ಗುಂಜಾಲ್, ಪ್ರಕರಣದ ಇತರೆ ಆರೋಪಿಗಳಾದ ಸಾಹಿಲ್ ಜೈನ್ ಹಾಗೂ ಭರತ್‌ಕುಮಾರ್ ಜೈನ್‌ಗೆ ತಲಾ 53.06 ಕೋಟಿ ರೂ., ತರುಣ್ ಕೊಂಡರಾಜುಗೆ 49.51 ಕೋಟಿ ರೂ. ದಂಡ ವಿಧಿಸಿದ್ದಾರೆ. ಅಲ್ಲದೆ, ದಂಡ ಪಾವತಿಸುವ ಸಂಬಂಧ ರನ್ಯಾ ರಾವ್ ಹಾಗೂ ಇತರೆ ಆರೋಪಿಗಳಿಗೆ ನೋಟಿಸ್ ನೀಡಿದ್ದಾರೆ. ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಈ ಹಿಂದೆ ಡಿಆರ್‌ಐ, ಶೋಕಾಸ್ ನೋಟಿಸ್ ನೀಡಿ ದಂಡದ ಬಗ್ಗೆ ಮಾಹಿತಿ ಕೊಟ್ಟಿತ್ತು. ಕಸ್ಟಮ್ಸ್ ಕಾಯಿದೆ ಅನ್ವಯ ಜಂಟಿ ನಿರ್ದೇಶಕರ ಬಳಿ ನೋಟಿಸ್ ಬಗ್ಗೆ ಪರಾಮರ್ಶಿಸುವಂತೆ ಆರೋಪಿಗಳು ಮೇಲ್ಮನವಿ ಸಲ್ಲಿಸಿದ್ದರು. ಆರೋಪಿಗಳು ದಂಡ ಪಾವತಿಸದಿದ್ದರೆ ಆಸ್ತಿ ಮುಟ್ಟುಗೋಲಿಗೂ ಅವಕಾಶವಿದೆ.

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

## ಪದವೀಧರರ ಸಮಸ್ಯೆಗಳಿಗೆ ಪಕ್ಷಾತೀತವಾಗಿ ಧ್ವನಿ: ಸುರೇಶ ಬಿಷ್ಟನಗೌಡ್ರ

**ಸಮಾಲೋಚನೆ ಸುದ್ದಿ ಹಾವೇರಿ**

ಪದವೀಧರರ ಸಮಸ್ಯೆಗಳಿಗೆ ಪಕ್ಷಾತೀತವಾಗಿ ಧ್ವನಿಯಾಗುವ ಉದ್ದೇಶದಿಂದ ಕರ್ನಾಟಕ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವುದಾಗಿ ವಕೀಲ ಹಾಗೂ ತೆರಿಗೆ ಸಲಹೆಗಾರ ಸುರೇಶ ಬಿಷ್ಟನಗೌಡ್ರ ತಿಳಿಸಿದರು.



ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪದವೀಧರರ ಧ್ವನಿ ವಿಧಾನ ಪರಿಷತ್‌ನಲ್ಲಿ ಸಮರ್ಥವಾಗಿ ಪ್ರತಿಧ್ವನಿಸಬೇಕಿದೆ. ಯಾವುದೇ ಪಕ್ಷದ ಪರವಾಗಿ ಅಲ್ಲ, ಪದವೀಧರರ ಸಮಸ್ಯೆಗಳ ಪರವಾಗಿ ಮಾತನಾಡುವ ಪ್ರತಿನಿಧಿಯ ಅಗತ್ಯವಿದೆ ಎಂಬ ಆಶಯದಿಂದ ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ.

ಈ ನಿಟ್ಟಿನಲ್ಲಿ ಜಿಲ್ಲೆಯ ಪದವೀಧರರ ಸಹಕಾರ ಅಗತ್ಯ ಎಂದರು.

ಪಶ್ಚಿಮ ಪದವೀಧರ ಕ್ಷೇತ್ರದಿಂದ ಆಯ್ಕೆಯಾದರೆ ಪದವೀಧರರಿಗೆ ಉದ್ಯೋಗಾವಕಾಶ ಹೆಚ್ಚಿಸುವುದು, ಸರ್ಕಾರಿ ನೇಮಕಾತಿ ಪ್ರಕ್ರಿಯೆಗಳನ್ನುಕಾಲಮಿತಿಯಲ್ಲಿಪೂರ್ಣಗೊಳಿಸುವಂತೆಸರ್ಕಾರದ ಗಮನ ಸೆಳೆಯಲಾಗುವುದು. ಗ್ರಾಮೀಣ ಭಾಗದ ಯುವಜನರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ, ಗ್ರಂಥಾಲಯ ಹಾಗೂ ಅಧ್ಯಯನ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡುವುದಾಗಿ ಹೇಳಿದರು.

ಸ್ವಯಂ ಉದ್ಯೋಗ ಹಾಗೂ ಉದ್ಯಮಶೀಲತೆಗೆ ಉತ್ತೇಜನ ನೀಡುವುದು, ಉದ್ಯೋಗ ಮಾರುಕಟ್ಟೆಗೆ ಅಗತ್ಯವಿರುವ ಕೌಶಲಾಭಿವೃದ್ಧಿ ತರಬೇತಿಗೆ ಆದ್ಯತೆ ನೀಡುವುದು ಹಾಗೂ ಮಹಿಳಾ ಮತ್ತು ಗ್ರಾಮೀಣ ಪದವೀಧರರಿಗೆ ಸಮಾನ ಅವಕಾಶ ಕಲ್ಪಿಸುವ ಕುರಿತು ನಿರಂತರವಾಗಿ ಧ್ವನಿ ಎತ್ತುವುದಾಗಿ ತಿಳಿಸಿದರು. ಪಶ್ಚಿಮ ಪದವೀಧರ ಕ್ಷೇತ್ರವ್ಯಾಪ್ತಿಯ ಧಾರವಾಡ, ಹಾವೇರಿ, ಗದಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಪದವೀಧರರೊಂದಿಗೆ ನಿರಂತರ ಸಂವಾದ ನಡೆಸಲಾಗುವುದು. ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಮಸ್ಯೆಗಳು ವಿಭಿನ್ನವಾಗಿದ್ದು, ಸ್ಥಳೀಯ ಅಗತ್ಯಗಳನ್ನು ಗುರುತಿಸಿ ಆದ್ಯತೆಯ ಮೇರೆಗೆ ಸಂಬಂಧಿಸಿದ ವೇದಿಕೆಗಳಲ್ಲಿ ಪ್ರಸ್ತಾಪಿಸುವುದು ತಮ್ಮ ಉದ್ದೇಶವಾಗಿದೆ ಎಂದರು. ಪ್ರಮುಖರಾದ ನಾಗರಾಜ ದ್ಯಾಮನಕೊಪ್ಪ, ಎನ್.ಬಿ. ತೋಟಗೇರ, ವೀರೇಶ ಬಳಿಗಾರ, ರಮೇಶ ಹಿರಗಪ್ಪನವರ, ಅಶೋಕ ಸಂಕಣ್ಣನವರ, ಮಲ್ಲಿಕಾರ್ಜುನ ಯಳವತ್ತಿ, ಮಹೇಶ ಪಾಟೀಲ, ಪ್ರದೀಪ ಹಾದಿಮನಿ ಇನ್ನಿತರರು ಸುದ್ದಿಗೋಷ್ಠಿಯಲ್ಲಿದ್ದರು.

## ಗಾಂಧೀಜಿ, ಶಾಸ್ತ್ರೀಜಿ ಆದರ್ಶ ಪಾಲಿಸಿ: ಸಿದ್ದರಾಜ ಕಲಕೋಟಿ

**ಸಮಾಲೋಚನೆ ಸುದ್ದಿ ಹಾವೇರಿ**

ಸತ್ಯ, ಪ್ರಾಮಾಣಿಕತೆ, ಸ್ವಾವಲಂಬನೆ, ನೈತಿಕತೆ ಹಾಗೂ ಮಾನವೀಯತೆಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡುಸರಳತೆಯಿಂದಬದುಕುವಮೂಲಕ ಮಹಾತ್ಮ ಗಾಂಧೀಜಿ ಹಾಗೂ ಲಾಲ್‌ಬಹದ್ದೂರ್ ಶಾಸ್ತ್ರೀಜಿ ಅವರ ಆದರ್ಶಗಳನ್ನು ಮುಂದುವರಿಸಬೇಕು ಎಂದು ಬಿಎಂ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಕಾರ್ಯದರ್ಶಿ ಸಿದ್ದರಾಜ ಕಲಕೋಟಿ ಹೇಳಿದರು.



ನಗರದಬಿಎಂಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಗಾಂಧೀಜಿ ಹಾಗೂ ಲಾಲ್‌ಬಹದ್ದೂರ್ ಶಾಸ್ತ್ರೀಜಿಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗಾಂಧೀಜಿ ಅವರು ದಕ್ಷಿಣ ಆಫ್ರಿಕಾದಲ್ಲಿದ್ದಾಗಲೇ ಹೋರಾಟದ ಮನೋಭಾವ ಬೆಳೆಸಿಕೊಂಡಿದ್ದರು. ಸ್ವಾರ್ಥಕ್ಕಿಂತ ದೇಶದ ಹಿತಕ್ಕೆ ಆದ್ಯತೆ ನೀಡಿ ಸತ್ಯ, ಪ್ರಾಮಾಣಿಕತೆ, ಸ್ವಾವಲಂಬನೆ, ನೈತಿಕತೆ ಹಾಗೂ ಮಾನವೀಯತೆಯ ಮೌಲ್ಯಗಳನ್ನು ಸಮಾಜಕ್ಕೆ ಸಾರಿದರು ಎಂದರು.

ಪ್ರಾಂಶುಪಾಲ ಡಾ. ಸಂತೋಷ ಕೃಷ್ಣಾಪುರ ಮಾತನಾಡಿ, ಸತ್ಯಕ್ಕೆ ಹಲವು ಮುಖಗಳಿಲ್ಲ, ಅದು ಸದಾ ಹೊಳೆಯುತ್ತಿರುತ್ತದೆ. ಗಾಂಧೀಜಿ ಹಾಗೂ ಶಾಸ್ತ್ರೀಜಿ ಅವರ ಜೀವನವೇ ಸತ್ಯ, ಸರಳತೆ ಮತ್ತು ಆದರ್ಶದ ಪ್ರತೀಕವಾಗಿದೆ. ಅಹಿಂಸೆಯನ್ನು ಶಕ್ತಿಯುತ ಅಸ್ತ್ರವನ್ನಾಗಿ ಮಾಡಿಕೊಂಡ ಗಾಂಧೀಜಿ, ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಇಡೀ ಜೀವನ ಸಮರ್ಪಿಸಿದರು. ವಿದ್ಯಾರ್ಥಿಗಳು ಅವರ ಆದರ್ಶ, ಸರಳತೆ ಹಾಗೂ ಸಮಾನತೆಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಶಿಕ್ಷಕಿಯರಾದ ಸುನೀತಾ, ಕವಿತಾ, ವೈಷ್ಣವಿ, ಶಾರದಾ ಎಚ್. ಹಾಗೂ ಸಿಬ್ಬಂದಿ ಇದ್ದರು.



ಮಹಾತ್ಮ ಗಾಂಧೀಜಿ ಜಯಂತಿ ನಿಮಿತ್ತ ಹಾವೇರಿ ನಗರದಲ್ಲಿರುವ ಗಾಂಧೀಜಿಯವರ ಮೂರ್ತಿಗೆ ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಮಾಲಾರ್ಪಣೆ ಮಾಡಿದರು. ಪಕ್ಷದ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ ಹಾಗೂ ಪಕ್ಷದ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

## 26 ವರ್ಷಗಳ ಸೇವೆಗೆ ಕಾಕೋಳ ಗ್ರಾಪಂನಿಂದ ಗೌರವ ಸನ್ಮಾನ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**

ಕಾಕೋಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವೆಂಕಟಾಪುರ ಗ್ರಾಮದಲ್ಲಿ ಸುಮಾರು 26 ವರ್ಷಗಳ ಕಾಲ ವಾಟರ್‌ಮ್ಯಾನ್ ಆಗಿ ಸೇವೆ ಸಲ್ಲಿಸಿದ ಖಿಮಪ್ಪ ಭೀಮಪ್ಪ ಲಮಾಣಿ ಅವರು ಅ.2ರಂದು ವಯೋನಿವೃತ್ತಿಹೊಂದಿದಹಿನ್ನೆಲೆಯಲ್ಲಿಕಾಕೋಳ ಗ್ರಾಮ ಪಂಚಾಯಿತಿ ವತಿಯಿಂದ ಅದ್ಧೂರಿಯಾಗಿ ಸನ್ಮಾನಿಸಿ ಬೀಳ್ಕೊಡಲಾಯಿತು.



ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಸಿಬ್ಬಂದಿ ವರ್ಗ, ಗ್ರಾಮದ ಹಿರಿಯ ಮುಖಂಡರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಹಾಗೂ ಸಂಜೀವಿನಿ ಒಕ್ಕೂಟದ ಕಾರ್ಯಕರ್ತರು ಉಪಸ್ಥಿತರಿದ್ದು, ಖಿಮಪ್ಪ ಲಮಾಣಿ ಅವರ ದೀರ್ಘಕಾಲದ ಸೇವೆಯನ್ನು ಸ್ಮರಿಸಿ ಅಭಿನಂದಿಸಿದರು.

ಗ್ರಾಮ ಪಂಚಾಯಿತಿ ಪಿಡಿಒ ಅಶೋಕ ಪೂಜಾರ, ಕಾರ್ಯದರ್ಶಿ ಶ್ರೀ ಹನುಮಪ್ಪ ಶಿಕಾರಿ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಿಲ್ ಕಲೆಕ್ಟರ್ ಸುರೇಶ್ ಕಾರ್ಯಕ್ರಮ ನಿರೂಪಿಸಿದರು. ಡಿಇಒ ನಿಂಗಪ್ಪ ವಂದನಾರ್ಪಣೆ ಸಲ್ಲಿಸಿದರು.

## ದೈಹಿಕ, ಮಾನಸಿಕ ಸ್ವಾಸ್ಥ್ಯವಾಗಿರುವುದೇ ಉತ್ತಮ ಆರೋಗ್ಯ

**ಧಾರವಾಡ:** ಆರೋಗ್ಯವೇ ಭಾಗ್ಯವಾಗಿದ್ದು, ದೈಹಿಕವಾಗಿ ಮಾನಸಿಕವಾಗಿ ಸ್ವಾಸ್ಥ್ಯವಾಗಿರುವುದೇ ಉತ್ತಮ ಆರೋಗ್ಯವಾಗಿದೆ ಎಂದು ಧಾರವಾಡದ ಸಿವಿಲ್ ಆಸ್ಪತ್ರೆಯ ವಲಯ ಆರೋಗ್ಯ ಅಧಿಕಾರಿ ರಾಜೇಂದ್ರ ಚಟ್ನಿಸ್ ಹೇಳಿದರು.

ಅವರು ಕರ್ನಾಟಕ ಕಲಾ ಕಾಲೇಜು, ಧಾರವಾಡ ಯುವ ರೆಡ್ ಕ್ರಾಸ್ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಎ ಮತ್ತು ಬಿ ಘಟಕಗಳ ಸಹಯೋಗದಲ್ಲಿ ವಿಶ್ವ ಹೃದಯ ದಿನದ ಅಂಗವಾಗಿ ಫ್ಯಾರನ್ ಸಭಾಂಗಣದಲ್ಲಿ ಆಯೋಜಿಸಿದ ಆರೋಗ್ಯಜಾಗೃತಿ, ರಕ್ತಪರೀಕ್ಷೆ ಹಾಗೂ ರಕ್ತದಾನ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಆರೋಗ್ಯದ ಮಹತ್ವವನ್ನು ಅರಿಯಬೇಕು, ನಿರಂತರವಾಗಿ ಆರೋಗ್ಯ ತಪಾಸಣೆ ಮಾಡಿಸಬೇಕು, ರಕ್ತದಾನ ಮಾಡಲು ಮುಂದೆ ಬರಬೇಕು. ಎಲ್ಲಾ ದಿನಗಳಲ್ಲಿ ರಕ್ತದಾನ ಮಹದಾನ ಶ್ರೇಷ್ಠವಾಗಿದೆ. ಜೀವಗಳನ್ನು ಉಳಿಸಲು ರಕ್ತದಾನ ಅರಿವು ಮೂಡಿಸುವ ಅವಶ್ಯಕತೆ ಇದೆ ಎಂದರು.

ಆರೋಗ್ಯ ಮತ್ತು ಶಿಕ್ಷಣ ಒಂದು ನಾಣ್ಯದ ಎರಡು ಮುಖಗಳು ಆರೋಗ್ಯ ಮತ್ತು ಶಿಕ್ಷಣದಿಂದ ಸರ್ವತೋಮುಖ ಅಭಿವೃದ್ಧಿ ಆಗಲು ಸಾಧ್ಯ.ಜನರಲ್ಲಿ ರಕ್ತದಾನದ ಕುರಿತು ಅರಿವು ಕಡಿಮೆ ಇತ್ತು. ಸರ್ಕಾರವು ಹಲವಾರು ಎನ್. ಎಸ್.ಎಸ್,ಯುವ ರೆಡ ಕ್ರಾಸ್, ರೋಟರಿ ಕ್ಲಬ್ ನಂತಹ ನಿಯಂತ್ರಣ ಕಾರ್ಯಕ್ರಮಗಳನ್ನು ಕೈಗೊಂಡಾಗ ಜನರು ರಕ್ತ ದಾನ ಮಾಡಲು ಮುಂದೆ ಬಂದಿದ್ದಾರೆ ಎಂದರು. ಧಾರವಾಡ ಸಿವಿಲ್ ಆಸ್ಪತ್ರೆಯ ರಕ್ತ ನಿಧಿ ಸಲಹೆಗಾರರಾದ ಶ್ರೀಶೈಲ ಕಲ್ಲುತ್ರ ಮಾತನಾಡಿ ಹಿಮೋಗ್ಲೋಬಿನ್ ಕಡಿಮೆ ಇರುವವರಿಗೆ, ಗರ್ಭಿಣಿ ಮಹಿಳೆಯರಿಗೆ, ಹೆಚ್‌ಐವಿ,ಅಪಘಾತ ವ್ಯಕ್ತಿಗಳಿಗೆ ರಕ್ತ ಅವಶ್ಯಕತೆ ಇರುತ್ತದೆ. ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯು ಕೇಂದ್ರ ಆಸ್ಪತ್ರೆಯಾಗಿದ್ದು ಸುತ್ತಮುತ್ತಲಿನ ಹಳ್ಳಿಗಳಿಂದ ರೋಗಿಗಳು ಬರುತ್ತಾರೆ. ಜಿಲ್ಲಾ ಆಸ್ಪತ್ರೆಯಲ್ಲಿ ಪ್ರತಿ ತಿಂಗಳಿಗೆ 500 ರಿಂದ 600 ಹೆರಿಗೆ ನಡೆಯುತ್ತವೆ ಅದ್ದರಿಂದ ಗರ್ಭಿಣಿ ಮಹಿಳೆಯರಿಗೆ ಶೇಕಡಾ 80 ರಷ್ಟು ರಕ್ತ ಅವಶ್ಯಕತೆ ಇರುತ್ತದೆ.18 ರಿಂದ 60 ವಯಸ್ಸಿನ ಅವರು, 45 ಕೆಜಿ ಹೊಂದಿರುವರು 150 ಎಮ್.ಎಲ್ 55 ಕೆಜಿ ಹೊಂದಿರುವರು 450 ಎಮ್.ಎಲ್ ರಕ್ತದಾನ ಮಾಡಬಹುದು. ಪ್ರತಿಶತ 13ಕ್ಕಿಂತ ಹಿಮೋಗ್ಲೋಬಿನ್ ಕಡಿಮೆ ಇರಬಾರದು ಎಂದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಒಟ್ಟು 50 ಯೂನಿಟ್ ರಕ್ತವನ್ನು ಸಂಗ್ರಹಿಸಲಾಯಿತು. ಕಾರ್ಯಕ್ರಮದಲ್ಲಿ ಕವಿವಿ ಕಲ್ಯಾಣ ಅಧಿಕಾರಿ ಡಾ. ಎಸ್.ಎಸ್.ಚಲವಾದಿ, ಪ್ರಾಚಾರ್ಯರಾದ ಡಾ.ಐ.ಸಿ.ಮುಳಗುಂದ ಕಾಲೇಜಿನ ಎನ್.ಎಸ್.ಎಸ್ ಅಧಿಕಾರಿಗಳಾದ ಪ್ರೊ.ಸಲೀಮಾ ಕೋಳೂರು, ಡಾ.ಸಿ.ಬಿ.ಐನಳ್ಳಿ, ರೆಡ್ ಕ್ರಾಸ್ ಅಧಿಕಾರಿಗಳಾದ ಡಾ. ವಾಮದೇವ್ ತಳವಾರ, ಡಾ, ಡಾ. ಸ್ಟೆಲ್ಲಾ ಸ್ಟೀವನ್, ವಿದ್ಯಾರ್ಥಿ ಕಾರ್ಯದರ್ಶಿಗಳು, ಯುವ ರೆಡ್‌ಕ್ರಾಸ್ ಮತ್ತು ಎನ್‌ಎಸ್‌ಎಸ್ ಘಟಕದವರು ಉಪಸ್ಥಿತಿ ಇದ್ದರು.




## ವಿಶ್ವ ಹಿಂದೂ ಪರಿಷತ್, ಬಜರಂಗದಳದ ಹಿಂದೂ ಮಹಾಗಣಪತಿ ಮೂರ್ತಿ ಅದ್ದೂರಿ ಶೋಭಾಯಾತ್ರೆ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**

ನಗರದ ಸಂಗಮ್ ಸರ್ಕಲ್ ಬಳಿ ವಿಶ್ವ ಹಿಂದು ಪರಿಷತ್, ಬಜರಂಗದಳದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಹಿಂದೂ ಮಹಾಗಣಪತಿ ಮೂರ್ತಿಯ ವಿಸರ್ಜನೆ ಪ್ರಯುಕ್ತ ಶುಕ್ರವಾರ ನಗರದಲ್ಲಿ ಅದ್ಧೂರಿಯಾಗಿ ಶೋಭಾಯಾತ್ರೆ ಜರುಗಿತು.

ಇಲ್ಲಿಯ ಸಂಗಮ್ ಸರ್ಕಲ್ ವೃತ್ತದಿಂದ ಹೊರಟ ಶೋಭಾಯಾತ್ರೆ ರಂಗನಾಥ ನಗರ, ಸುಣಗಾರ ಓಣಿ, ಕೋಟ್ರೇಶ್ವರ ನಗರ, ಕುಂಬಾರ ಓಣಿ, ದೊಡ್ಡಪೇಟೆ, ಚಕ್ಕಿ ಮಿಕ್ಕಿ ಸರ್ಕಲ್, ಎಂ.ಜಿ.ರಸ್ತೆ, ದುರ್ಗಾ ಸರ್ಕಲ್, ಕುರುಬಗೇರಿ ಕ್ರಾಸ್, ಹಲಗೇರಿ ಕ್ರಾಸ್, ಬಸ್ ನಿಲ್ದಾಣ, ರಾಜರಾಜೇಶ್ವರಿ ನಗರ ಕ್ರಾಸ್ ಮುಂತಾದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಅಲ್ಲಿಂದ ಮೂರ್ತಿಯನ್ನು ಹರಿಹರಕ್ಕೆ ತೆಗೆದುಕೊಂಡು ಹೋಗಿ ತುಂಗಭದ್ರಾ ನದಿಯಲ್ಲಿ ವಿಸರ್ಜಿಸಲಾಯಿತು.

ಶೋಭಾಯಾತ್ರೆಯಲ್ಲಿ ಬೃಹತ್ ನರಸಿಂಹ ಮೂರ್ತಿ, ವಿವಿಧ ಬಗೆಯ ಗೊಂಬೆಗಳು, ನುಚ್ಚುಪುಡಿ ವಾದ್ಯ, ಸಮಾಳ, ಹಲಗೆ ಹಾಗೂ ಡಿಜೆ ಸಂಗೀತ ಮೆರವಣಿಗೆಯ ವಿಶೇಷ ಆಕರ್ಷಣೆಯಾಗಿದ್ದವು.ಯುವಕ,ಯವತಿಯರು ಡಿಜೆ ಹಾಡಿಗೆ ತಕ್ಕಂತೆ ನೃತ್ಯ ಮಾಡಿದರು.

ಮೆರವಣಿಗೆ ಸಾಗಿಬರುವ ದಾರಿಯುದ್ದಕ್ಕೂ ವಿವಿಧ ಸರ್ಕಲ್‌ಗಳಲ್ಲಿ ದಾನಿಗಳು ಮತ್ತು ವಿವಿಧ ಸಮಾಜಗಳ ವತಿಯಿಂದ ಸಾರ್ವಜನಿಕರಿಗೆ ಉಪಹಾರ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿತ್ತು.

ಪ್ರಕಾಶ ಬುರಡಿಕಟ್ಟಿ, ನಾಗರಾಜ ಕೊರವರ, ವಿನಯಕುಮಾರ ಬಾಳನಗೌಡ್ರ, ಅಭಿಷೇಕ ಪಟ್ಟಣಶೆಟ್ಟಿ, ಅಜಯ ಮಠದ, ಕುಬೇರಗೌಡ ಸಣ್ಣಮನಿ, ನಾಗರಾಜ ಪವಾರ, ಅನಿಲ್ ಮಳವಳ್ಳಿ, ಮಂಜುನಾಥ ಉಪ್ಪಾರ, ದಿಲೀಪ್ ಕಾಟಿ, ಪ್ರಶಾಂತ ಕುರುಬರ, ಸಂದೇಶ ಮೆಹರವಾಡೆ, ಮನೋಜ, ಸುನಿಲ್ ಮಿಸ್ಕಿನ್, ಅಭಿಷೇಕ ಕುಂದಾಪುರ, ರೋಹಿತ್ ಗೌಡ, ಚನ್ನಬಸಪ್ಪ ಓಂಕಾರಣ್ಣನವರ, ಬೀರೇಶ ಗುದಿಗೇರ, ಕಾಂತೇಶ ಉಪ್ಪಾರ, ಸಂತೋಷ ದೈವಜ್ಞ, ಬಸವರಾಜ ಉಪ್ಪಾರ, ಚಂದ್ರು ಮುದೇನೂರ, ಕೇಶವ ಹೆದ್ದೇರಿ, ಶಶಿ ಬಳ್ಳಾರಿ, ಬೀರೇಶ ಗುದಿಗೇರ, ಶರತ್ ನೂಲಗೇರಿ, ನಾಗರಾಜ ಕಲಾಲ, ಮಂಜು ಉಪ್ಪಾರ, ಕಿಶೋರ ಬಗಾಡಿ, ಮಯೂರ ಭಂಡಾರಿ ಮತ್ತಿತರರಿದ್ದರು.



## ಅ. 4ರಂದು ಕಾಗಿನೆಲೆ ಕನಕ ಗುರುಪೀಠದಲ್ಲಿ ಕುರುಬರ ಸಂಘಗಳ ಸಭೆ

ಹಾವೇರಿ: ಜಿಲ್ಲೆಯ ಕಾಗಿನೆಲೆಯ ಶ್ರೀ ಕನಕ ಗುರುಪೀಠದಲ್ಲಿ ಅಕ್ಟೋಬರ್ 4ರಂದು ಹಾವೇರಿ ತಾಲೂಕು ಕುರುಬರ ಸಂಘ ಹಾಗೂ ತಾಲೂಕು ಶ್ರೀ ಕನಕ ನೌಕರರ ಸಂಘದ ಸಭೆಯನ್ನು ಆಯೋಜಿಸಲಾಗಿದೆ ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ವೀರಪಾಕ್ಷ ಹುಲ್ಲೂರ ತಿಳಿಸಿದ್ದಾರೆ.

ಶ್ರೀ ಕನಕ ಗುರುಪೀಠದ ಜಗದ್ಗುರುಗಳಾದ ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿರುವ ಈ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಾಗರಾಜ ಆನ್ವೇರಿ ವಹಿಸಲಿದ್ದಾರೆ.

ಮುಂಬರುವ ನವೆಂಬರ್‌ನಲ್ಲಿ ನಡೆಯಲಿರುವ ಶ್ರೀ ಕನಕ ಜಯಂತೋತ್ಸವ ಹಾಗೂ ಶ್ರೀ ಕನಕ ರಥೋತ್ಸವದ ಪೂರ್ವಭಾವಿ ಸಿದ್ಧತೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು. ಈ ವರ್ಷದ ಶ್ರೀ ಕನಕ ಜಯಂತೋತ್ಸವ ಹಾಗೂ ರಥೋತ್ಸವದ ಜವಾಬ್ದಾರಿಯನ್ನು ಹಾವೇರಿ ತಾಲೂಕು ಕುರುಬರ ಸಂಘ ಮತ್ತು ಶ್ರೀ ಕನಕ ನೌಕರರ ಸಂಘ ವಹಿಸಿಕೊಂಡಿವೆ.

## ಅ.4 ರಂದು ನೈಸರ್ಗಿಕ ಹಾಗೂ ಸಾವಯವ ಕೃಷಿ ಕುರಿತು ವಿಶೇಷ ಕಾರ್ಯಾಗಾರ: ಮಲ್ಲಿಕಾರ್ಜುನ ಬಳ್ಳಾರಿ

**ಸಮಾಲೋಚನೆ ಸುದ್ದಿ ಬ್ಯಾಡಗಿ**

ನೈಸರ್ಗಿಕ ಹಾಗೂ ಸಾವಯವ ಕೃಷಿ ಕುರಿತು ವಿಶೇಷ ಕಾರ್ಯಾಗಾರ ಅ.4 ಭಾನುವಾರ ಬೆಳಿಗ್ಗೆ 10 ಘಂಟೆಗೆ ಪಟ್ಟಣದಲ್ಲಿರುವ ರೈತ ಸಂಘದ ಜಿಲ್ಲಾ ಘಟಕದ ಕಾರ್ಯಾಲಯದಲ್ಲಿ ನಡೆಯಲಿದೆ.



ಈ ಕುರಿತು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಪ್ರಕಟಣೆ ನೀಡಿದ್ದು, ರಾಸಾಯನಿಕ ಮುಕ್ತ ಕೃಷಿ ಪದ್ಧತಿಗಳು, ಮಣ್ಣಿನ ಫಲವತ್ತತೆ ಕಾಪಾಡುವಿಕೆ ಮತ್ತು ಆಧುನಿಕ ಸಾವಯವ ಕೃಷಿ ವಿಧಾನಗಳ ಕುರಿತು ಅನುಭವಿ ರೈತರಿಂದ ಮತ್ತು ಕೃಷಿ ತಜ್ಞರು ಹಾಗೂ ವಿಜ್ಞಾನಿಗಳು ರೈತರಿಗೆ ವಿಶೇಷ ಉಪನ್ಯಾಸ ಮತ್ತು ಮಾರ್ಗದರ್ಶನ ನೀಡಲಾಗುವುದು..

ಕಡಿಮೆ ಬಂಡವಾಳದಲ್ಲಿ ಹೆಚ್ಚು ಇಳುವರಿ ಪಡೆಯುವುದು ಮತ್ತು ಉತ್ಪಾದನಾ ವೆಚ್ಚವನ್ನು ತಗ್ಗಿಸಲು ನೈಸರ್ಗಿಕ ಕೃಷಿ ಹೇಗೆ ಸಹಕಾರಿ ಎಂಬುದರ ಕುರಿತು ಪ್ರಾಯೋಗಿಕ ಮಾಹಿತಿ ಮಣ್ಣಿನ ಆರೋಗ್ಯವನ್ನು ಪುನಶ್ಚೇತನಗೊಳಿಸುವುದು, ಕಡಿಮೆ ನೀರಿನ ಬಳಕೆ ಹಾಗೂ ಮಳೆನೀರು ಕೊಯ್ಲು ಮೂಲಕ ಸುಸ್ಥಿರ ಕೃಷಿ ಮಾಡುವ ಬಗ್ಗೆ ಜಾಗೃತಿ ಮೂಡಿಸಲಾಗುವುದು.

ಮಾರುಕಟ್ಟೆಯಲ್ಲಿ ಸಾವಯವ ಉತ್ಪನ್ನಗಳಿಗೆ ಹೆಚ್ಚುತ್ತಿರುವ ಬೇಡಿಕೆ ಮತ್ತು ಆರೋಗ್ಯಕರ ಆಹಾರೋತ್ಪಾದನೆ ಮಹತ್ವದ ಕುರಿತು ರೈತರಿಗೆ ಅರಿವು ಮೂಡಿಸಲಾಗುವುದು, ಕೃಷಿಯಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳು, ಮಾರುಕಟ್ಟೆ ಸೌಲಭ್ಯಗಳು ಮತ್ತು ಸರ್ಕಾರಿ ಸವಲತ್ತುಗಳ ಕುರಿತು ಗಣ್ಯರೊಂದಿಗೆ ಮುಕ್ತಚರ್ಚೆ ಹಾಗೂ ಸಂವಾದ ಕಾರ್ಯಕ್ರಮಗಳಕುರಿತುವಿಶೇಷಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಕಾರಣ ಜಿಲ್ಲೆಯ ಎಲ್ಲಾ ಪ್ರಗತಿಪರ ರೈತರು, ಕೃಷಿ ಆಸಕ್ತರು ಹಾಗೂ ಸಂಘದ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿಭಾಗವಹಿಸಿಇದರಸದುಪಯೋಗಪಡೆದುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

## ಅ.5ಕ್ಕೆ ಬ್ಯಾಡಗಿಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆಗಮನ

**ಪ್ರಧಾನಿ ಮೋದಿ ಜನ್ಮದಿನದ ಅಂಗವಾಗಿ ಸೇವಾ ಸಂಕಲ್ಪ ಅಭಿಯಾನ;
ಸಸಿ ನೆಡುವಿಕೆ, ಪಾದಯಾತ್ರೆ ಹಾಗೂ ಸಾರ್ವಜನಿಕ ಸಭೆ**

**ಸಮಾಲೋಚನೆ ಸುದ್ದಿ ಬ್ಯಾಡಗಿ**

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ದೇಶಾದ್ಯಂತ ನಡೆಯುತ್ತಿರುವ ಸೇವಾ ಸಂಕಲ್ಪ ಅಭಿಯಾನದ ಭಾಗ ವಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಅ.5 ಸೋಮವಾರರಂದು ಪಟ್ಟಣಕ್ಕೆ ಆಗಮಿಸಲಿದ್ದಾರೆ ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ಹಾವೇರಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ತಿಳಿಸಿದರು.



ಪಟ್ಟಣದ ಬಿಜೆಪಿ ಕರ್‍ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ವಿವಿಧ ಸೇವಾ ಕಾರ್ಯಕ್ರ ಮಗಳನ್ನು ಹಮ್ಮಿಕೊಳ್ಳಲಾಗಿದ್ದು, ನೆಹರು ನಗರದಲ್ಲಿ ಮೊದಲಿಗೆ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಬಳಿಕ ದಾನಮ್ಮ ದೇವಸ್ಥಾನದಿಂದ ಸಿದ್ದೇಶ್ವರ ಕಲ್ಯಾಣ ಮಂಟಪದವರೆಗೆ ಬೃಹತ್ ಪಾದಯಾತ್ರೆ ನಡೆಯಲಿದೆ.

ಸಾರ್ವಜನಿಕರಸಭೆ:ಪಾದಯಾತ್ರೆಮುಗಿದನಂತರಎಪಿಎಂಸಿಯಲ್ಲಿರುವ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಸಾರ್ವಜನಿಕ ಸಭೆ ಆಯೋಜಿಸಲಾಗಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ರಾಜ್ಯ ಹಾಗೂ ಜಿಲ್ಲಾ ಪಕ್ಷದ ಮುಖಂಡರು ಹಾಗೂ ಪ್ರಮುಖರು ಭಾಗವಹಿಸಲಿದ್ದಾರೆ.

ಒಂದು ತಿಂಗಳು ಸೇವಾ ಅಭಿಯಾನ: ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ಸೆ.17ರಿಂದ ಅ.17ರವರೆಗೆ ಒಂ ದು ತಿಂಗಳ ಕಾಲ ದೇಶಾದ್ಯಂತ ಸೇವಾ ಸಂಕಲ್ಪ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ಅವಧಿಯಲ್ಲಿ ಸಾರ್ವಜನಿಕ ಸೇವೆ, ಪರಿಸರ ಸಂರಕ್ಷಣೆ ಸೇರಿದಂತೆ ವಿವಿಧ ಜನಪರ ಕಾರ್ಯಕ್ರಮಗಳ ಮೂಲಕ ಸಮಾಜಕ್ಕೆ ಕೊಡುಗೆ ನೀಡುವ ಉದ್ದೇಶ ಹೊಂದಲಾಗಿದೆ.

ಬ್ಯಾಡಗಿಯಲ್ಲಿ ವಿಜಯೇಂದ್ರ ಭಾಗವಹಿಸಲಿರುವ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಬಿಜೆಪಿ ಪಕ್ಷದ ಎಲ್ಲ ಮುಖಂಡರು, ಪದಾಧಿಕಾರಿಗಳು, ವಿವಿಧ ಮೋರ್ಚಾಗಳ ಸದಸ್ಯರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು. ಈ ವೇಳೆ ತಾಲೂಕಾಧ್ಯಕ್ಷ ನಿಂಗಪ್ಪ ಬಟ್ಟಲಕಟ್ಟಿ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

SAMALOCHANE RANEBENNURSUDDI
Kannada Daily Morning

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ



# ಗಾಂಧೀಜಿ, ಶಾಸ್ತ್ರೀಜಿ ತತ್ವಾದರ್ಶ ದಾರಿದೀಪ

## ಗಾಂಧಿ ಪುತ್ಥಳಿಗೆ ಮಾಲಾರ್ಪಣೆ-ಸದ್ಭಾವನಾ ನಡಿಗೆ | ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಹೇಳಿಕೆ

**ಹಾವೇರಿ:** ಮಹಾತ್ಮಾ ಗಾಂಧೀಜಿ ಹಾಗೂ ಲಾಲ್‌ಬಹದ್ದೂರ್ ಶಾಸ್ತ್ರೀಜಿ ಈ ಇಬ್ಬರು ಮಹಾನ್ ವ್ಯಕ್ತಿಗಳ ಆಚಾರ-ವಿಚಾರ, ಜೀವನ ಚರಿತ್ರೆ ಇಂದಿಗೂ ಪ್ರಸ್ತುತ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಹೇಳಿದರು

ನಗರದ ಗಾಂಧಿ ಭವನದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಲಾದ ಮಹಾತ್ಮಾಗಾಂಧಿ ಹಾಗೂ ಲಾಲ್‌ಬಹದ್ದೂರ ಶಾಸ್ತ್ರಿ ಜಯಂತಿ ಕಾರ್ಯಕ್ರಮದಲ್ಲಿ ಚರಕದ ನೂಲು ತೆಗೆಯುವ ಮೂಲಕ ಉದ್ಘಾಟನೆ ನೆರವೇರಿಸಿ, ಉಭಯ ನಾಯಕರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಗಾಂಧೀಜಿ ಅವರ ಜೀವನ ಹಾಗೂ ಬದುಕಿನ ಆದರ್ಶದಿಂದ ರಾಷ್ಟ್ರಪಿತ ಎಂದು ಕರೆಸಿಕೊಂಡರು. ತತ್ವರಹಿತ ರಾಜಕಾರಣ, ದುಡಿಮೆಯಿಲ್ಲದ ಸಂಪತ್ತು, ಆತ್ಮಸಾಕ್ಷಿಯಿಲ್ಲದ ಸಂತೋಷ, ಚಾರಿತ್ರ್ಯವಿಲ್ಲದ ಶಿಕ್ಷಣ, ನೀತಿಯಿಲ್ಲದ ವ್ಯಾಪಾರ, ಮಾನವೀಯತೆಯಿಲ್ಲದ ವಿಜ್ಞಾನ ಹಾಗೂ ತ್ಯಾಗವಿಲ್ಲದ ಪೂಜೆ ಈ ಏಳು ಪಾಪಗಳನ್ನು ತೊಡೆದುಹಾಕಬೇಕು ಎಂದು ಗಾಂಧೀಜಿ ಅವರು ಹೇಳುತ್ತಿದ್ದರು. ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಸ್ವತಂತ್ರ, ಸಮಾಜ ನಿರ್ಮಾಣ ಅವರ ಆಶಯವಾಗಿತ್ತು ಎಂದರು.

ಗಾಂಧೀಜಿ ಅವರು ಅಹಿಂಸಾ ಹಾಗೂ ಸತ್ಯಾಗ್ರಹದಿಂದ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು. ಗಾಂಧೀಜಿ ಅವರು "ನನ್ನ ಜೀವನವೇ ನನ್ನ ಸಂದೇಶ" ಎಂದು ಹೇಳುತ್ತಿದ್ದರು. ಮನುಷ್ಯ ನಿರ್ಮಾಣ ಮಾಡಿದ ಯಾವುದೇ ಆಯುಧಕ್ಕಿಂತ ಹರಿತವಾದ ಆಯುಧ ಅಹಿಂಸಾ ಮಾರ್ಗ ಎಂದು ಹೇಳುತ್ತಿದ್ದರು. ಸತ್ಯ ಹಾಗೂ ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ಪಡೆದ ಹಿನ್ನಲೆಯಲ್ಲಿ ವಿಶ್ವ ಭಾರತಕ್ಕೆ ಬಹಳ ಗೌರವ ನೀಡುತ್ತದೆ.ದಲೈಲಾಮಾ, ನೆಲ್ಸನ್ ಮಂಡೇಲಾ ಸೇರಿದಂತೆ ಅನೇಕರು ಗಾಂಧೀಜಿ ಅವರ ಮಾರ್ಗ ಅನುಸರಿಸುತ್ತಿದ್ದರು. ಗಾಂಧೀಜಿ ಅವರು ಸ್ವಚ್ಛತೆಗೆ ಹಾಗೂ ಸ್ವದೇಶಿ ಬಟ್ಟೆಗೆ ಬಹಳ ಆದ್ಯತೆ ನೀಡಿದ್ದರು. ಸ್ವಾವಲಂಬಿ ರಾಷ್ಟ್ರ ಮಾಡಬೇಕು ಎಂಬುದು ಅವರ ಆಶಯವಾಗಿತ್ತು. ದೇಶಕ್ಕೆ ಸ್ವಾತಂತ್ರ್ಯದ ಜತೆಗೆ ಸ್ವಚ್ಛತೆ ಬಹಳ ಮುಖ್ಯವಾಗಿದೆ ಎಂದು ಹೇಳುತ್ತಿದ್ದರು. ಗಾಂಧೀಜಿ ಅವರು ರಾಮರಾಜ್ಯದ ಕನಸು ಕಂಡಿದ್ದರು. ಈ ನಿಟ್ಟಿನಲ್ಲಿ ಇಂದು ಆಡಳಿತವನ್ನು ಗ್ರಾಮ ಮಟ್ಟದಲ್ಲಿ ತೆಗೆದುಕೊಂಡು ಹೋಗಲಾಗಿದೆ ಎಂದರು.

ಇಂದು ಭಯೋತ್ಪಾದನೆ ಹಾಗೂ ಯುದ್ಧ ಭೀತಿಯನ್ನು ಎದುರಿಸಲಾಗುತ್ತಿದೆ. ಇದರಿಂದ ಏನನ್ನು ಸಾಧಿಸಲು ಸಾಧ್ಯವಿಲ್ಲ. ಜಗತ್ತಿನಲ್ಲಿ ಶಾಂತಿ ನೆಲೆಸಬೇಕು. ಈ ನಿಟ್ಟಿನಲ್ಲಿ ಗಾಂಧೀಜಿ ಅವರ ತತ್ವಾದರ್ಶಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ಜೀವನ




ಎಲ್ಲರಿಗೂ ಸ್ಫೂರ್ತಿದಾಯಕವಾಗಿದೆ ಎಂದು ಹೇಳಿದರು.

ಲಾಲ್‌ಬಹದ್ದೂರ ಶಾಸ್ತ್ರಿ ಅವರು ದೇಶ ಕಂಡ ಸರಳ ಪ್ರಧಾನ ಮಂತ್ರಿಗಳಾಗಿದ್ದರು. "ಜೈ ಜವಾನ್ ಜೈ ಕಿಸಾನ್" ಎಂಬ ಘೋಷವಾಕ್ಯದೊಂದಿಗೆ ರೈತರನ್ನು ಹಾಗೂ ಯೋಧರನ್ನು ಹುರಿದುಂಬಿಸಿದವರು. ಈ ಇಬ್ಬರು ನಾಯಕರ ಆದರ್ಶ ಮಾರ್ಗಗಳಲ್ಲಿ ಎಲ್ಲರೂ ನಡಿಯೋಣ. ಲಾಲಬಹದ್ದೂರ ಶಾಸ್ತ್ರೀಜಿ ಅವರು ಸರಳ ಸಜ್ಜನಿಕೆ ಅಪರೂಪದ ವ್ಯಕ್ತಿಗಳಾಗಿದ್ದರು. ಇಬ್ಬರು ಮಹಾನ್ ನಾಯಕರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಮತ್ತು ರಾಷ್ಟ್ರಭಕ್ತಿ ಹೊಂದಬೇಕು ಎಂದು ಹೇಳಿದರು.

ಉಪನ್ಯಾಸಕರಾಗಿ ಭಾಗವಹಿಸಿದ ಆಕ್ಸ್‌ಫರ್ಡ್ ಕಾಲೇಜಿನ ಉಪನ್ಯಾಸಕ ವಿರೇಶ ಹಿತ್ತಲಮನಿ ಅವರು ಮಾತನಾಡಿ, ಜಗತ್ತಿನಾದ್ಯಂತ ಗಾಂಧೀಜಿಯವರ ತತ್ವಾದರ್ಶಗಳು ಮೆಚ್ಚುಗೆಗೆ ಪಾತ್ರವಾಗಿದೆ. ಸತ್ಯ ಹಾಗೂ ಅಂಹಿಸಾ ಮಾರ್ಗದಲ್ಲಿ ನಡೆದರು. ಅವರ ಆದರ್ಶಗಳು ಸಾರ್ವಕಾಲಿಕವಾಗಿವೆ ಎಂದರು.

ಲಾಲ್‌ಬಹದ್ದೂರ ಶಾಸ್ತ್ರಿ ಅವರು ಸರಳ, ಪ್ರಾಮಾಣಿಕ ನಾಯಕ. ಗಾಂಧೀಜಿ ಹಾಗೂ ಶಾಸ್ತ್ರೀಜಿ ಅದಮ್ಯ ಚೇತನಗಳು ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಡೆದರೆ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತೆ ಎಂದು ಹೇಳಿದರು.

**ಬಹುಮಾನ ವಿತರಣೆ:** ಸಮಾರಂಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯೋಜಿಸಿದ ಜಿಲ್ಲಾ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆಯ ವಿಜೇತ ವಿದ್ಯಾರ್ಥಿಗಳಾದ ಪ್ರೌಢಶಾಲಾ ವಿಭಾಗದಿಂದ ಗಣೇಶ ಬಂಕಾಪುರ, ಬಿಬಿಹಾಜರಾ ಗರೀಸಾಬವರ, ಶಾಫಿಯಾ ಮುಲ್ಲಾ, ಪದವಿ ಪೂರ್ವ ವಿಭಾಗದಿಂದ ರಮ್ಯಾ ರಾಕೇರ, ಶಿಲ್ಪಾ ಚಂದ್ರಾಪಟ್ಟಣ, ಅರ್ಚನಾ ಹಟ್ಟಿ, ಪದವಿ ವಿಭಾಗದಿಂದ ರೇಖಾ ದೊಡ್ಡಕುರುಬರ, ಬಿಂದು ನೀಲನಗೌಡ್ರ ಹಾಗೂ ಸುಫೀಯಾ ಹಳ್ಳಿ ಇವರುಗಳಿಗೆ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನದ ಪ್ರಮಾಣಪತ್ರ ವಿತರಣೆ ಮಾಡಲಾಯಿತು.

**ಸರ್ವಧರ್ಮ ಪ್ರಾರ್ಥನೆ:** ಕಾರ್ಯಕ್ರಮದಲ್ಲಿ ಶಿಕ್ಷಕಿ ಶ್ರೀಮತಿ ರಂಜನಾ ಭಟ್ ಭಗವದ್ಗೀತೆ, ಶಿಕ್ಷಕ ಜಮೀರಅಹ್ಮದ ಸತ್ತಗಿಹಳ್ಳಿ ಖುರಾನ್ ಹಾಗೂ ಸಿಸ್ಟರ್ ಪಾಸ್ಕಾ ಮೇರು ಅವರು ಬೈಬಲ್ ಪಠಣ ಮೂಲಕ ಸರ್ವಧರ್ಮ ಪ್ರಾರ್ಥನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಯಶೋಧಾ ವಂಟಗೋಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಲ್ಜೀತಕುಮಾರ, ಅಪರ ಜಿಲ್ಲಾಧಿಕಾರಿ ಡಾ. ನಾಗರಾಜ್ ಎಲ್, ಉಪವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ಚಂದ್ರಪ್ಪ, ಡಿಡಿಪಿಐ ಮೋಹನ ದಂಡಿನ, ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರ ಎನ್.ಎನ್.ಪಾಟೀಲ, ಕೈಮಗ್ಗ ಇಲಾಖೆ ಅಧಿಕಾರಿ ಅಮೂಲ್ಯ ಬೊಮ್ಮಣ್ಣನವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಶ್ರೀಮತಿ ರೇವತಿ ಹೊಸಮಠ, ನಗರಸಭೆ ಪೌರಾಯುಕ್ತ ಕಾಂತರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಶ್ರೀಮತಿ ಲತಾ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲೇಶ ಕರಿಗಾರ, ಉಡಚಪ್ಪ ಮಾಳಗಿ, ಬಸವರಾಜ ಹೆಡಿಗ್ಗೊಂಡ ಇತರರು ಉಪಸ್ಥಿತರಿದ್ದರು.

ಶಿಕ್ಷಕ ನಾಗರಾಜ ನಡುವಿನಮಠ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿ, ಕೊನೆಯಲ್ಲಿ ವಂದಿಸಿದರು.

**ಸದ್ಭಾವನಾ ನಡಿಗೆ:** ಕಾರ್ಯಕ್ರಮಕ್ಕೂ ಮುನ್ನ ಬೆಳಿಗ್ಗೆ ನಗರದ ಗಾಂಧಿ ವೃತ್ತದಲ್ಲಿರುವ ಗಾಂಧಿ ಪುತ್ಥಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಮಾಲಾರ್ಪಣೆ ಮಾಡಿ, ಸದ್ಭಾವನಾ ನಡಿಗೆಗೆ ಚಾಲನೆ ನೀಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಯಶೋದಾ ವಂಟಗೋಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಲ್ಜಿತ್‌ಕುಮಾರ, ಜಿ.ಪಂ.ಕಾರ್ಯದರ್ಶಿ ಡಾ.ಪುನಿತ್, ಉಪವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ, ನಗರಸಭೆ ಪೌರಾಯುಕ್ತ ಕಾಂತರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಚುನಾವಣಾ ತಹಶೀಲ್ದಾರ ಅಮೃತಗೌಡ ಪಾಟೀಲ, ವಿವಿಧ ಇಲಾಖೆ ಅಧಿಕಾರಿಗಳು ಗಾಂಧಿ ವೃತ್ತದಿಂದ ಗಾಂಧಿ ಭವನದವರೆಗೆ ಸದ್ಭಾವನಾ ನಡಿಗೆಯಲ್ಲಿ ಭಾಗವಹಿಸಿದ್ದರು.



## ಗಾಂಧೀ ಜಯಂತಿ ಅಂಗವಾಗಿ ಕವಿವಿಯಲ್ಲಿ ಅಹಿಂಸಾ ದಿನಾಚರಣೆ

**ಧಾರವಾಡ:** ಕರ್ನಾಟಕ ವಿಶ್ವವಿದ್ಯಾಲಯದ ಗಾಂಧೀ ಅಧ್ಯಯನ ವಿಭಾಗ, ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಕೋಶ ಹಾಗೂ ಕವಿವಿ ಗಾಂಧೀ ಶಾಂತಿ ಪ್ರತಿಷ್ಠಾನ ಕೇಂದ್ರ, ಧಾರವಾಡ ಇವರ ಸಹಯೋಗದಲ್ಲಿ 157ನೇ ಗಾಂಧೀ ಜಯಂತಿ ಅಂಗವಾಗಿ ಅಂತರರಾಷ್ಟ್ರೀಯ ಅಹಿಂಸಾ ದಿನಾಚರಣೆ ಕಾರ್ಯಕ್ರಮವನ್ನು ಶುಕ್ರವಾರ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎ.ಎಂ. ಖಾನ್ ಅವರು ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಉದ್ಘಾಟಿಸಿದರು. ಬಳಿಕ ಸರ್ವಧರ್ಮ ಪ್ರಾರ್ಥನೆ ನೆರವೇರಿಸಲಾಯಿತು.

ಸೆಪ್ಟೆಂಬರ್ 26ರಂದು ಆಯೋಜಿಸಲಾಗಿದ್ದ ಸಿದ್ಧ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎ.ಎಂ. ಖಾನ್ ಅವರು ವಿದ್ಯಾರ್ಥಿಗಳು ಹಾಗೂ ಉಪಸ್ಥಿತರಿದ್ದವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಸ್ವಾತಿ ಗಣಪತಿ ಭಟ್ (ಎಂ.ಇ.ಎಸ್. ಕಾಲೇಜು, ಸಿರಸಿ), ದ್ವಿತೀಯ ಬಹುಮಾನವನ್ನು ಲೆವಿಸಾ ಫರ್ನಾಂಡಿಸ್ (ಜೆ.ಎಸ್.ಎಸ್. ಕಾಲೇಜು, ಧಾರವಾಡ) ಹಾಗೂ ತೃತೀಯ ಬಹುಮಾನವನ್ನು ಅಮೃತಾ ಕೆ. (ಕೆ.ಎಲ್.ಇ. ಕಾಲೇಜು, ಬಿ.ಬಿ.ಎ., ಹುಬ್ಬಳ್ಳಿ) ಪಡೆದರು.

ಸಮಾಧಾನಕರ ಬಹುಮಾನವನ್ನು ಶಾಜಿಯಾ ಖಾನ್ (ಸನಾ ಪದವಿ ಕಾಲೇಜು, ಹುಬ್ಬಳ್ಳಿ) ಹಾಗೂ ಅಫಿಫಾ ಝುರೀನ್ ಶೇಖ್ (ಬಂಗೂರ್‌ನಗರ ಕಾಲೇಜು, ಡಾಂಡೇಲಿ) ಅವರಿಗೆ ನೀಡಲಾಯಿತು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವರಾದ ಶ್ರೀ ಅರವಿಂದ ಕರಿಬಸನಗೌಡ, ಮೌಲ್ಯಮಾಪನ ಕುಲಸಚಿವರಾದ ಪ್ರೊ. ಎ.ಎಂ. ಕಡಕೋಳ, ಗಾಂಧೀ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ. ಶೌಕತ್ ಅಜೀಂ, ಡಾ. ಎಂ.ಬಿ. ದಳಪತಿ, ವಿಭಾಗದ ಅಧ್ಯಾಪಕರಾದ ಡಾ. ಶಿವಾನಂದ ಶೆಟ್ಟರ್, ಗಾಂಧೀ ವೇದಿಕೆ ಕವಿವಿಯ ಅಧ್ಯಕ್ಷರಾದ ಡಾ. ಎಸ್.ಬಿ. ಬಸೆಟ್ಟಿ, ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು, ವಿಭಾಗದ ವಿದ್ಯಾರ್ಥಿಗಳು ಹಾಗೂ ಎನ್‌ಎಸ್‌ಎಸ್ ಸ್ವಯಂಸೇವಕರು ಉಪಸ್ಥಿತರಿದ್ದರು.



## ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧೀಜಿ ಕೊಡುಗೆ ಅಪಾರ: ಶಾಸಕ ಬಸವರಾಜ ಶಿವಣ್ಣನವರ

**ಸಮಾಲೋಚನೆ ಸುದ್ದಿ ಬ್ಯಾಡಗಿ**

ಮಹಾತ್ಮ ಗಾಂಧೀಜಿಯವರು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆ ಅಪಾರ. ದೇಶದ ಸ್ವಾತಂತ್ರ್ಯಕ್ಕಾಗಿ ಅವರು ನಡೆಸಿದ ಹೋರಾಟ, ಅಹಿಂಸೆ ಮತ್ತು ಸತ್ಯದ ಮಾರ್ಗದ ಮೂಲಕ ಸಾರಿದ ಸಂದೇಶಗಳು ಭಾರತ ದೇಶ ಇರುವವರೆಗೂ ಅವರ ಹೆಸರನ್ನು ಅಜರಾಮರವಾಗಿಸಿವೆ ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ಪಟ್ಟಣದ ಕಾಂಗ್ರೆಸ್ ಭವನದಲ್ಲಿ ಗಾಂಧಿ ಜಯಂತಿ ಅಂಗವಾಗಿ ಮಹಾತ್ಮ ಗಾಂಧೀಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪನಮನ ಅರ್ಪಿಸಿದ ಬಳಿಕ ಅವರು ಮಾತನಾಡಿದರು. ಮಹಾತ್ಮ ಗಾಂಧೀಜಿಯವರು ಸತ್ಯ, ಅಹಿಂಸೆ, ಶಾಂತಿ ಹಾಗೂ ಸರ್ವಧರ್ಮ ಸಮಭಾವದ ತತ್ವಗಳನ್ನು ಜೀವನದು ದ್ದಕ್ಕೂ ಪಾಲಿಸುವ ಮೂಲಕ ಇಡೀ ಜಗತ್ತಿಗೆ ಮಾದರಿಯಾಗಿದ್ದಾರೆ. ಬ್ರಿಟಿಷರ ದಾಸ್ಯದಿಂದ ಭಾರತವನ್ನು ಮುಕ್ತಗೊ ಳಿಸಲು ಅವರು ಕೈಗೊಂಡ ಸತ್ಯಾಗ್ರಹ, ಅಸಹ ಕಾರ ಚಳವಳಿ ಹಾಗೂ ಕ್ವಿಟ್ ಇಂಡಿಯಾ ಚಳವಳಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಶಕ್ತಿ ನೀಡಿದವು. ಅವರ ಸರಳ ಜೀವನ, ಉನ್ನತ ಚಿಂತನೆ ಹಾಗೂ ತ್ಯಾಗದ ಮನೋಭಾವ ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕವಾಗಿವೆ ಎಂದರು.

ಗಾಂಧೀಜಿಯವರ ಆಶಯದಂತೆ ಗ್ರಾಮ ಸ್ವರಾಜ್ಯ, ಸ್ವಾವಲಂಬನೆ, ಸಾಮಾಜಿಕ ಸಾಮರಸ್ಯ ಹಾಗೂ ಶೋಷಣೆ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಜಾತಿ, ಧರ್ಮ, ಭಾಷೆಯ ಭೇದಭಾವ ಮರೆತು ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುವುದು ಇಂದಿನ ಅಗತ್ಯವಾಗಿದೆ. ಗಾಂಧೀಜಿಯವರ ಆದರ್ಶಗಳನ್ನು ಕೇವಲ ಜಯಂತಿ ಆಚರಣೆಗೆ ಸೀಮಿತಗೊಳಿಸದೆ, ಅವುಗಳನ್ನು ನಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.




## ಗಾಂಧಿಜೀ, ಶಾಸ್ತ್ರೀಜಿ ದೇಶಕ್ಕೆ ಸ್ಫೂರ್ತಿದಾಯಕ, ಹಮನೀಯರ ಸರಳತೆ, ದೇಶಭಕ್ತಿ ಅಮರ

**ಸವಣೂರು :** ತಾಲೂಕಿನ ಕಾರಡಗಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜಯಂತಿಯನ್ನು ಅಚರಿಸಲಾಯಿತು.

ಶಾಲಾ ಹಿರಿಯ ಶಿಕ್ಷಕಿ ಜಿ.ಎನ್.ಪಾಟೀಲ ಮಾತನಾಡಿ ಅಕ್ಟೋಬರ್ 2 ರಂದು ಆಚರಿಸುವ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿಯು ಭಾರತೀಯರಿಗೆ ಅತ್ಯಂತ ಪ್ರಮುಖವಾದ ದಿನವಾಗಿದೆ. ಪ್ರತಿವರ್ಷ ಅಕ್ಟೋಬರ್ 2 ರಂದು ದೇಶವು ತನ್ನ ಇಬ್ಬರು ಮಹಾನ್ ಚೇತನರಾದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಭಾರತದ ಎರಡನೇ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನವನ್ನು ಸ್ಮರಿಸುತ್ತದೆ. ಇಬ್ಬರೂ ಬೇರೆ ಬೇರೆ ದಿನಗಳಲ್ಲಿ ಜನಿಸಿದ್ದರೂ, ಅಕ್ಟೋಬರ್ 2ರಂದೇ



ಇವರ ಜಯಂತಿ ಬಂದಿರುವುದು ವಿಶೇಷ ಹಾಗೂ ದೇಶಕ್ಕೆ ಸ್ಫೂರ್ತಿದಾಯಕ. ಇವರ ಸರಳತೆ, ದೇಶಭಕ್ತಿ ಅಮರ. ಮಹಾತ್ಮ ಗಾಂಧೀಜಿಯವರು ಅಕ್ಟೋಬರ್ 2, 1869ರಂದು ಗುಜರಾತಿನ ಪೋರ್ ಬಂದರ್‌ನಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಮೋಹನದಾಸ್ ಕರಮಚಂದ್ ಗಾಂಧಿ. **ಶಾಂತಿ ಮತ್ತು ಸ್ವಾವಲಂಬನೆ:** ಗಾಂಧೀಜಿಯವರು ಶಾಂತಿ-

ಅಹಿಂಸೆಯ ಪಾಠ ಕಲಿಸಿದರೆ, ಶಾಸ್ತ್ರಿಯವರು ಸ್ವಾವಲಂಬನೆಯ ಪಾಠ ಕಲಿಸಿದರು. ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಆದರ್ಶಗಳನ್ನು, ನೈತಿಕ ಮೌಲ್ಯಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕರಮಚಂದ್ ಗಾಂಧಿ. ಇಬ್ಬರೂ ಮಹಾನ್ ವ್ಯಕ್ತಿಗಳು ಅತ್ಯಂತ ಸಾದವಿ ಜೀವನವನ್ನು ನಡೆಸಿದರು. ಅಧಿಕಾರದಲ್ಲಿದ್ದರೂ ಸರಳತೆಯನ್ನು ಬಿಡಲಿಲ್ಲ. ವೈಯಕ್ತಿಕ ಹಿತಾಸಕ್ತಿಗಿಂತ ದೇಶದ ಹಿತವೇ ಮುಖ್ಯವೆಂದು ಭಾವಿಸಿ ಸಮರ್ಪಣಾ ಭಾವದಿಂದ ಸೇವೆ ಸಲ್ಲಿಸಿದರು.ಗಾಂಧೀಜಿಯವರು ಹಿಂಸೆಯ ಪಾಠ ಕಲಿಸಿದರೆ, ಶಾಸ್ತ್ರಿಯವರು ಸ್ವಾವಲಂಬನೆಯ ಪಾಠ ಕಲಿಸಿದರು. ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಆದರ್ಶಗಳನ್ನು, ನೈತಿ-ಕ ಮೌಲ್ಯಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು

ಕಾರ್ಯಕ್ರಮದಲ್ಲಿಮುಖ್ಯೋಪಾಧ್ಯಾಯ ಎಫ್. ಆರ್. ,ಜಿ.ಎನ್. ಪಾಟೀಲ, ಎ.ವಿ. ಬನ್ನಿಕಲ್, ಎಮ್.ಎಚ್. ಮಾದರ,ಎಸ್.ಬಿ. ದೊಡ್ಡಮನಿ, ಯಶೋಧಾ. ಆರ್. ಎಚ್., ಮೇಘಾ.ಡಿ. ಹರ್ತಿ, ಮಹಾದೇವಿ. ಡಿ. ಸವಣೂರ, ಅತಿಥಿ ಶಿಕ್ಷಕಿ ರೂಪಾ ತೊಂಡೂರ, ಅಡುಗೆ ಸಿಬ್ಬಂದಿ ಹಾಗೂ ಶಾಲಾ ಮಕ್ಕಳು ಹಾಜರಿದ್ದರು.

ಸಮಾಲೋಚನೆ ಸುದ್ದಿ
SAMALOCHANE RANEBENNURSUDDI
Kannada Daily Morning

# ಗುರುಕುಲ ಜ್ಞಾನ, ಸಂಸ್ಕಾರ ಕೊಡುವ ಕೇಂದ್ರವಾಗಿ ಬೆಳೆಯಲಿ

## ರೋಣ ಹಿರೇಮಠದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಗುರುಕುಲ ಪ್ರಾರಂಭೋತ್ಸವ | ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳ ಆಶೀರ್ವಚನ

ರೋಣ: ಸಕಲರಿಗೂ ಒಳಿತನ್ನು ಬಯಸಿದ ಧರ್ಮ ವೀರಶೈವ. ವೀರಶೈವ ಧರ್ಮದಶ್ರೇಷ್ಠಗುರುಪರಂಪರೆಆಯಾಕಾಲಘಟ್ಟಗಳಲ್ಲಿಬೆಳೆದುಕೊಂಡು ಬಂದಿವೆ. ಇಂದು ಪ್ರಾರಂಭಗೊಂಡ ಶ್ರೀ ಜಗದ್ಗುರು ಪಂಚಾಚಾರ್ಯ ಗುರುಕುಲ ಜ್ಞಾನ ಮತ್ತು ಸಂಸ್ಕಾರ ಕೊಡುವ ಕೇಂದ್ರವಾಗಿ ಬೆಳೆಯಲಿ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಶುಕ್ರವಾರ ಪಟ್ಟಣದ ಹಿರೇಮಠದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಗುರುಕುಲ ಪ್ರಾರಂಭೋತ್ಸವ ಹಾಗೂ ಲಿಂ.ಶ್ರೀ ವಿರೂಪಾಕ್ಷಯ್ಯ ಅಜ್ಜನವರ 20ನೇ ವರ್ಷದ ಪುಣ್ಯಸ್ಮರಣೋತ್ಸವ ಅಂಗವಾಗಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಗುರು ಎಂದರೆ ಕೇವಲ ಜ್ಞಾನ ಬೋಧಿಸುವವನು ಅಲ್ಲ. ಜ್ಞಾನ, ಸಂಸ್ಕಾರ, ಸೇವೆ, ಸತ್ಯ ನಿಷ್ಠೆಯ ಮೂಲಕ ಸಮಾಜಕ್ಕೆ ದಾರಿ ತೋರಿಸುವ ದೀಪ. ಈ ಗುರುಕುಲ ವೀರಶೈವ ಧರ್ಮದ ಭವಿಷ್ಯಕ್ಕೆ ಭದ್ರವಾದ ಅಡಿಪಾಯ ಹಾಕಲಿ. ವಿದ್ಯೆಯೊಂದಿಗೆ ವಿನಯ, ವಚನದೊಂದಿಗೆ ಆಚರಣೆ, ಜ್ಞಾನದೊಂದಿಗೆ ಸೇವೆ, ಧರ್ಮದೊಂದಿಗೆ ಮಾನವೀಯತೆ ಬೆಳೆದು ಸಮಾಜಕ್ಕೆ ಬೆಳಕು ತೋರಲಿ. ಧರ್ಮ ನಿಷ್ಠೆಯ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ಶಾಸ್ತ್ರ ಜ್ಞಾನವನ್ನು ಜೀವನ ಮೌಲ್ಯಗಳನ್ನು ಸಮನ್ವಯಗೊಳಿಸುವ ಕಾರ್ಯವನ್ನು ಗುರುಕುಲ ಮಾಡುವ ಸಂಕಲ್ಪ ಕೈಗೊಳ್ಳಲಿ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ತತ್ವ ಸಿದ್ಧಾಂತಗಳನ್ನು ಸಾಧಕರಿಗೆ ಬೋಧಿಸಿ ಜ್ಞಾನವಂತರನ್ನಾಗಿ ಮಾಡುವ ಸಂಕಲ್ಪ ಕೈಕೊಂಡು ಕಾರ್ಯ ಮಾಡಲಿ. ಈ ದಿಸೆಯಲ್ಲಿ ಹಿರೇಮಠದ ಜಗದೀಶ್ವರಸ್ವಾಮಿ ಅವರ ಕಾರ್ಯ ಶ್ಲಾಘನೀಯ ಎಂದು ಹರ್ಷ ವ್ಯಕ್ತಪಡಿಸಿದರು.

> **ರೋಣದ ಹಿರೇಮಠದಿಂದ ಆರಂಭವಾಗುತ್ತಿರುವ ಗುರುಕುಲ ಶಾಲೆಗೆ ನಮ್ಮ ಪಾಟೀಲ ಮನೆತನದಿಂದ ಪ್ರತಿ ವರ್ಷ 1 ಲಕ್ಷ ರೂ. ಗಳನ್ನು ನೀಡಲಾಗುವುದು. ಗದಗ ಗುರುಕುಲದಲ್ಲಿ ವೈದಿಕ ಸೇವೆ ಪಡೆದವರು ಗ್ರಾಮೀಣ ಭಾಗಕ್ಕೆ ಬರುವಂತಾಗಲಿ. ಇದರಿಂದ ಗ್ರಾಮೀಣ ಭಾಗದ ವೀರಶೈವ ಲಿಂಗಾಯತ ಮಕ್ಕಳಿಗೆ ಅನುಕೂಲವಾಗಲಿ.**
>
> | ಜಿ.ಎಸ್. ಪಾಟೀಲ, ವಿಧಾನಸಭೆ ಸಭಾಧ್ಯಕ್ಷ



ಧರ್ಮ ಸಮಾರಂಭ ಉದ್ಘಾಟಿಸಿದ ವಿಧಾನ ಸಭಾಧ್ಯಕ್ಷ ಜಿ.ಎಸ್. ಪಾಟೀಲ ಮಾತನಾಡಿ, ಪ್ರಾಚೀನ ಗುರು ಪರಂಪರೆಯ ಮೌಲ್ಯಗಳನ್ನು ಆಧುನಿಕ ಕಾಲದ ಅಗತ್ಯಗಳೊಂದಿಗೆ ಸಮನ್ವಯಗೊಳಿಸುವ ಕಾರ್ಯವನ್ನು ಈ ಗುರುಕುಲ ಮಾಡಲಿ. ಇಲ್ಲಿಂದ ಹೊರಹೊಮ್ಮುವ ವಟುಗಳು ಸಮಾಜಕ್ಕೆ ಜ್ಞಾನದ ಬೆಳಕು ತೋರಲಿ. ಧರ್ಮಜ್ಯೋತಿ ನಿರಂತರವಾಗಿ ಬೆಳೆಯಲೆಂದು ಆಶಿಸಿದರು.

ನರೇಗಲ್ಲ ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯರು, ಅಬ್ಬಿಗೇರಿ ವೀರಭದ್ರ ಶಿವಾಚಾರ್ಯರು ಉಪದೇಶಾಮೃತವನ್ನಿತ್ತರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಹಿರೇಮಠದ ಜಗದೀಶ್ವರಸ್ವಾಮಿ ಅವರು ಮಾತನಾಡಿ, ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಸಂಸ್ಕಾರ ಬೇಕು. ಸಂಸ್ಕಾರವಂತರಾಗಲು ಗುರುಕುಲ ಶಿಕ್ಷಣ ಅಗತ್ಯ. ಎಲ್ಲರ ಸಹಕಾರದಿಂದ ಅತ್ಯುತ್ತಮವಾದ ಗುರುಕುಲ ಮಾಡಬೇಕೆಂಬ ಸತ್ಯ ಸಂಕಲ್ಪ ನಮ್ಮದಾಗಿದೆ. ಸಕಲ ಸದ್ಭಕ್ತರ ಸಹಕಾರ ಸೇವಾ ಮನೋಭಾವ ಇರಲೆಂದು ಬಯಸಿದರು.

ಇದೇ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿ ಅವರ 157ನೇ ಮತ್ತು ದಿವಂಗತ ಪ್ರಧಾನಿ ಲಾಲ್ ಬಹದ್ದೂರ ಶಾಸ್ತ್ರಿಯವರ 122ನೇ ಜನ್ಮ ಜಯಂತಿ ಮಹೋತ್ಸವದ ಅಂಗವಾಗಿ ಅವರ ಭಾವಚಿತ್ರಕ್ಕೆ ಶ್ರೀ ರಂಭಾಪುರಿ ಜಗದ್ಗುರುಗಳು ಪುಷ್ಪಾರ್ಚನೆ ನೆರವೇರಿಸಿದರು. ಮಲಕಸಮುದ್ರಮಠದ ಶೇಖರಯ್ಯ ಶಾಸ್ತ್ರಿಗಳು ಪ್ರಾಸ್ತಾವಿಕ ನುಡಿ ಸಲ್ಲಿಸಿದರು.

ರೋಣ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಮಿಥುನ್ ಪಾಟೀಲ, ಶಿವಣ್ಣ ಪಲ್ಲೇದ, ಮುತ್ತಣ್ಣ ಸಂಗಳದ, ಮಾದೇವಗೌಡ ಲಿಂಗನಗೌಡ್ರ, ಬಸವರಾಜ ನವಲಗುಂದ, ರಾಜಣ್ಣ ಸುಂಕದ, ಶಿವಪ್ಪ ನವಲಗುಂದ, ಶಶಿಧರ ಧರ್ಮಾಯತ, ವೀರೇಶ ಕೂಗು, ಶೇಖರಜ್ಜ ಮಲ್ಲಸಮುದ್ರಮಠ, ವೀರಣ್ಣ ಶೆಟ್ಟರ, ಅಕ್ಷಯ್ ಪಾಟೀಲ ಇದ್ದರು. ಹೊಸಹಳ್ಳಿಮಠದ ವೀರೇಶ್ವರಸ್ವಾಮಿ ಅವರಿಂದ ವೇದಘೋಷ, ವೀರೇಶ ಕೂಗು ಅವರಿಂದ ಸ್ವಾಗತ ಜರುಗಿತು. ವೀರಯ್ಯ ಸೋಮನಕಟ್ಟಿಮಠ ಅವರು ಕಾರ್ಯಕ್ರಮ ನಿರೂಪಿಸಿದರು.

### ತಾರತಮ್ಯ ನಿವಾರಣೆಯಾಗಲಿ

ದಕ್ಷಿಣ ಕರ್ನಾಟಕ ಭಾಗದ ಕಾವೇರಿಗೆ ಸಿಗುವ ಪ್ರಾಧ್ಯಾನ್ಯತೆ ಉತ್ತರ ಕರ್ನಾಟಕ ಭಾಗದ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಿಗದಿರುವುದು ಉತ್ತರ ಕರ್ನಾಟಕ ಭಾಗದ ಜನರ ದೌರ್ಭಾಗ್ಯ. ಈ ಭಾಗದ ಶಾಸಕರು ಹಾಗೂ ಸಚಿವರು ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ಕಡೆಗೆ ಗಮನಹರಿಸಬೇಕು. ಇಲ್ಲದಿದ್ದರೆ ತಾರತಮ್ಯ ನಿರಂತರವಾಗಿರುತ್ತದೆ ಎಂದು ಶ್ರೀ ರಂಭಾಪುರಿ ಜಗದ್ಗುರುಗಳು ಸಲಹೆ ನೀಡಿದರು.



# ಬಿಜೆಪಿ ವತಿಯಿಂದ ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಅಭಿಯಾನ

**ಸಮಾಲೋಚನೆ ಸುದ್ದಿ ಬ್ಯಾಡಗಿ**

ಸ್ವಚ್ಛ ಭಾರತ ಅಭಿಯಾನದ ಆಶಯದಂತೆ ಸ್ವಚ್ಛತೆ ಕೇವಲ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಲ್ಲ. ಸಾರ್ವಜ ನಿಕರ ಸಹಭಾಗಿತ್ವವೂ ಅತ್ಯಗತ್ಯವಾಗಿದೆ ಎಂದು ಮಾಜಿ ಶಾಸಕ ಬಿಜೆಪಿ ಜಿಲ್ಲಾದ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ದೇಶಾದ್ಯಂತ ನಡೆಯುತ್ತಿರುವ ಸೇವಾ ಸಂಕಲ್ಪ ಅಭಿಯಾನದ ಅಂಗ ವಾಗಿ ಭಾರತೀಯ ಜನತಾ ಪಕ್ಷದ ಬ್ಯಾಡಗಿ ಮಂಡಲದ ವತಿಯಿಂದ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸ್ವಚ್ಛತಾ ಅಭಿಯಾನ ಕರ್ಯಕ್ರದಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಬಸ್ ನಿಲ್ದಾಣ ಸೇರಿ ದಂತೆ ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕದೆ, ಸ್ವಚ್ಛತೆ ಕಾಪಾಡುವ ಮೂಲಕ ಸ್ವಚ್ಛ ಹಾಗೂ ಸುಂದರ ಪಟ್ಟಣ ನಿರ್ಮಾಣಕ್ಕೆ ಪ್ರತಿ ಯೊಬ್ಬರೂ ಸಹಕರಿಸಬೇಕು ಎಂದರು.

ಸ್ವಚ್ಛತಾ ಹಿ ಸೇವಾ:ಬಿಜೆಪಿ ಜಿಲ್ಲಾ ಮಾಜಿ ಉಪಾಧ್ಯಕ್ಷ ಬಸವರಾಜ ಛತ್ರದ ಮಾತನಾಡಿ, ಸ್ವಚ್ಛತಾ ಹಿ ಸೇವಾ ಎಂಬ ಆಶಯ ದಂತೆ ಪ್ರತಿಯೊಬ್ಬ ನಾಗರಿಕರೂ ತಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿಟ್ಟುಕೊಂಡಲ್ಲಿ ಪರಿಸರ ಸಂರಕ್ಷಣೆಗೆ ಅಮೂಲ್ಯ ಕೊಡುಗೆ ನೀಡಿದಂ ತಾಗುತ್ತದೆ. ಸ್ವಚ್ಛತೆ ಒಂದು ದಿನದ ಕಾರ್ಯಕ್ರಮಕ್ಕೆ ಸೀಮಿತವಾಗದೆ, ಪ್ರತಿದಿನದ ಜೀವನದ ಭಾಗವಾಗಬೇಕು. ಸಾರ್ವಜನಿಕರು ಕಸವನ್ನು ಎಲ್ಲೆಂದರಲ್ಲಿ ಎಸೆಯದೆ, ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡುವ ಅಭ್ಯಾಸ ಬೆಳೆಸಿ ಕೊಳ್ಳಬೇಕು ಎಂದು ಹೇಳಿದರು.

ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಆದ್ಯತೆ:ಬಿಜೆಪಿ ಮಂಡಲ ಅಧ್ಯಕ್ಷ ನಿಂಗಪ್ಪ ಬಟ್ಟಲಕಟ್ಟಿ ಮಾತನಾಡಿ, ಬಸ್ ನಿಲ್ದಾಣವು ಪ್ರತಿನಿತ್ಯ ನೂ ರಾರು ಪ್ರಯಾಣಿಕರು ಆಗಮಿಸುವ ಪ್ರಮುಖ ಸಾರ್ವಜನಿಕ ಸ್ಥಳವಾಗಿದ್ದು, ಇಲ್ಲಿ ಸ್ವಚ್ಛತೆ ಕಾಪಾಡುವುದು ಅತ್ಯಂತ ಅಗತ್ಯ ವಾಗಿದೆ. ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಕಾಪಾಡುವ ಜವಾಬ್ದಾರಿ ಸ್ಥಳೀಯ ಆಡಳಿತದೊಂದಿಗೆ ಸಾರ್ವಜನಿಕರ ಮೇಲೂ ಇದೆ. ಪ್ರತಿ ಯೊಬ್ಬರೂ ತಮ್ಮ ಜವಾಬ್ದಾರಿ ಅರಿತು ನಡೆದುಕೊಂಡರೆ ಸ್ವಚ್ಛ ಹಾಗೂ ಆರೋಗ್ಯಕರ ಬ್ಯಾಡಗಿ ನಿರ್ಮಾಣ ಸಾಧ್ಯ ಎಂದು ಮುಖಂಡರು ಅಭಿಪ್ರಾಯಪಟ್ಟರು. ಈ ವೇಳೆ ಸೇರಿದಂತೆ ಬಿಜೆಪಿ ಮುಖಂಡರು, ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.



# ಬ್ರೈಟ್ ಬಿಗಿನಿಂಗ್ ಶಾಲೆಯಲ್ಲಿ ಗಾಂಧೀಜಿ, ಶಾಸ್ತ್ರಿ ಜಯಂತಿ

**ಗಜೇಂದ್ರಗಡ:** ನಗರ ಸಮೀಪದ ಸೈನಿಕ ನಗರ ಹತ್ತಿರ ಇರುವ ಬ್ರೈಟ್ ಬಿಗಿನಿಂಗ್ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿಯನ್ನು ಶುಕ್ರವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿ, ಗೌರವ ಸಮರ್ಪಿಸಲಾಯಿತು. ಬಳಿಕ ವಿದ್ಯಾರ್ಥಿಗಳಿಗೆ ಇಬ್ಬರು ಮಹನೀಯರ ಜೀವನ, ದೇಶಸೇವೆ ಹಾಗೂ ಅವರು ಪ್ರತಿಪಾದಿಸಿದ ಮೌಲ್ಯಗಳ ಕುರಿತು ತಿಳಿಸಲಾಯಿತು.

ಬ್ರೈಟ್ ಎಜ್ಯುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಎನ್. ಎಂ. ಮುದಗಲ್ಲ ಮಾತನಾಡಿ, ಮಹಾತ್ಮ ಗಾಂಧೀಜಿ ಅವರು ಸತ್ಯ ಮತ್ತು ಅಹಿಂಸೆಯ ಮಾರ್ಗದ ಮೂಲಕ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಕು ತೋರಿಸಿದ ಮಹಾನ್ ನಾಯಕರು. ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಸರಳತೆ, ಪ್ರಾಮಾಣಿಕತೆ ಮತ್ತು ದೇಶಭಕ್ತಿಗೆ ಹೆಸರಾದವರು. ಇಂತಹ ಮಹನೀಯರ ಜೀವನಾದರ್ಶಗಳನ್ನು ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಟ್ರಸ್ಟ್‌ನ ಕಾರ್ಯದರ್ಶಿ ಸೀತಲ ಓಲೇಕಾರ ಮಾತನಾಡಿ, ಮಕ್ಕಳಿಗೆ ಕೇವಲ ಪಠ್ಯಪುಸ್ತಕದ ಶಿಕ್ಷಣ ನೀಡುವುದಷ್ಟೇ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯಲ್ಲ. ದೇಶಕ್ಕಾಗಿ ದುಡಿದ ಮಹನೀಯರ ಜೀವನ ಹಾಗೂ ಆದರ್ಶಗಳನ್ನು ಪರಿಚಯಿಸುವ ಮೂಲಕ ಮಕ್ಕಳಲ್ಲಿ ಉತ್ತಮ ಸಂಸ್ಕಾರ, ಶಿಸ್ತು, ಪ್ರಾಮಾಣಿಕತೆ ಮತ್ತು ದೇಶಪ್ರೇಮದ ಮನೋಭಾವ ಬೆಳೆಸಬೇಕು. ಗಾಂಧೀಜಿ ಅವರ ಸ್ವಚ್ಛತೆ, ಸತ್ಯ ಮತ್ತು ಅಹಿಂಸೆಯ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ. ಶಾಸ್ತ್ರಿ ಅವರ ಸರಳ ಜೀವನ ಮತ್ತು ಕರ್ತವ್ಯನಿಷ್ಠೆ ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಶಾಲಾ ಸಿಬ್ಬಂದಿಗಳಾದ ತವಸೀನಬಾನು ಕರ್ನಾಚಿ, ನಸ್ರೀನ ಮುಧೋಳ, ಸಂಗಮೇಶ ರೇವಡಿ, ರವಿಚಂದ್ರ ನಿಡಗುಂದಿ, ಶಾಂತಮ್ಮ ಮುದುಟಗಿಮಠ, ಶಾಂತಾ ಸೋರೆಬಾನ, ಅಂಜುಮ ಹಂಪಿಹೊಳಿ ಸೇರಿದಂತೆ ಶಿಕ್ಷಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



# ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಬಸವ ಪುರಸ್ಕಾರ– 2026 ಪ್ರಶಸ್ತಿ

**ಬೆಂಗಳೂರು:** ನಗರದ ಅರಮನೆ ಮೈದಾನದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ, ಬಸವ ಪರಿಷತ್ ವತಿಯಿಂದ ಆಯೋಜಿಸಲಾಗಿದ್ದ ಬಸವ ಪುರಸ್ಕಾರ – 2026 ಪ್ರಶಸ್ತಿ ಪ್ರದಾನ ಸಮಾರಂಭವು ಪ. ಪೂ. ಮಹಾಜಗದ್ಗುರು ಡಾ. ಮಾತೆ ಗಂಗಾದೇವಿ ಅವರ ದಿವ್ಯ ಸಾನಿಧ್ಯದಲ್ಲಿ ನೆರವೇರಿತು.

ಸಂಘಟನೆ ಮತ್ತು ಸಮಾಜ ಸೇವೆ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಯನ್ನು ಗುರುತಿಸಿ ರಾಜ್ಯಾಧ್ಯಕ್ಷರಾದ ಶ್ರೀ ಸಿ. ಎಸ್. ಷಡಾಕ್ಷರಿಯವರಿಗೆ ಪ್ರತಿಷ್ಠಿತ "ಬಸವ ಪುರಸ್ಕಾರ – 2026" ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ನೌಕರರ ಹಿತಾಸಕ್ತಿ, ಸಂಘಟನಾ ಚಟುವಟಿಕೆಗಳು ಹಾಗೂ ಸಮಾಜಮುಖಿ ಸೇವೆಯ ಮೂಲಕ ಸಲ್ಲಿಸಿರುವ ಗಮನಾರ್ಹ ಕೊಡುಗೆಗೆ ಸಂದ ಈ ಗೌರವವು ಸೇವಾ ಕ್ಷೇತ್ರಕ್ಕೆ ಮತ್ತೊಂದು ಮಹತ್ವದ ಮೈಲಿಗಲ್ಲಾಗಿದೆ.

ಸಂಘಟನಾ ಶಕ್ತಿ, ಸಮಾಜಮುಖಿ ಸೇವೆ, ಸಮರ್ಪಿತ ನಾಯಕತ್ವ ಈ ಗೌರವದ ಕ್ಷಣದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾಲಿ ಸಂಸದರಾದ ಬಸವರಾಜ್ ಬೊಮ್ಮಾಯಿ, ಶಾಸಕರಾದ ಶರವಣ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಈ ಶುಭ ಸಂದರ್ಭದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರು ಹಾಗೂ ಸರ್ಕಾರಿ ನೌಕರರ ಸಮಷ್ಠಿ –ವಿಕಾಸ ಪ್ರಜ್ಞೆಯ ನಾಯಕರಾದ ಶ್ರೀ ಸಿ ಎಸ್ ಷಡಾಕ್ಷರಿ ರವರಿಗೆ ಹಾರ್ದಿಕ ಅಭಿನಂದನೆಗಳನ್ನು ಕ ರಾ ಸ ನೌಕರರ ಸಂಘ ಬೆಂಗಳೂರು ಉಪಾಧ್ಯಕ್ಷರು ಹಾಗೂ ಜಿಲ್ಲಾ ಅಧ್ಯಕ್ಷರು ಗದಗ ಡಾ ಬಸವರಾಜ ಬಳ್ಳಾರಿ ಲಕ್ಷ್ಮೇಶ್ವರ ಅಧ್ಯಕ್ಷರಾದ ಗುರುರಾಜ ಹವಳದ ಪ್ರಧಾನ ಕಾರ್ಯದರ್ಶಿ ಎಂ ಎ ನದಾಫ್ ಖಜಾಂಚಿ ಎಂ ಡಿ ವಾರದ ಬಸವರಾಜ ಯರಗುಪ್ಪಿ ಎಂ ಎ ಅಕ್ಕಿ ಗಿರೀಶ ಜಿಲ್ಲಾ ನಾಮನಿರ್ದೇಶಿತ ಸದಸ್ಯರಾದ ಶ್ರೀಮತಿ ಎಲ್ ಎನ್ ನಂದೆಣ್ಣವರ ಎಂ ಎಸ್ ಹಿರೇಮಠ ಮುಂತಾದವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ




# ಹರಿಹರ ಶಾಖಾ ಗ್ರಂಥಾಲಯದಲ್ಲಿ ಗಾಂಧೀಜಿ, ಶಾಸ್ತ್ರಿ ಜಯಂತಿ ಆಚರಣೆ

**ಹರಿಹರ:** ಜಿಲ್ಲಾ ಕೇಂದ್ರ ಗ್ರಂಥಾಲಯದ ಹರಿಹರ ಶಾಖಾ ಗ್ರಂಥಾಲಯದಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಜಯಂತಿಯನ್ನು ಶುಕ್ರವಾರ ಆಚರಿಸಲಾಯಿತು.

ಶಾಖಾ ಪ್ರಭಾರಧಾರಕ ರವಿಕುಮಾರ್ ಅವರು ಮಹಾತ್ಮ ಗಾಂಧೀಜಿ ಅವರ 157ನೇ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀ ಅವರ 122ನೇ ಜಯಂತಿ ಅಂಗವಾಗಿ ಇಬ್ಬರು ಮಹನೀಯರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ಗಾಂಧೀಜಿಯವರ ಸತ್ಯ, ಅಹಿಂಸೆ ಹಾಗೂ ಸ್ವಾವಲಂಬನೆಯ ತತ್ವಗಳು ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀ ಅವರ 'ಜೈಜವಾನ್, ಜೈಕಿಸಾನ್' ಘೋಷವಾಕ್ಯ ಇಂದಿಗೂ ಪ್ರಸ್ತುತವಾಗಿವೆ.



ಮಹನೀಯರ ಸರಳತೆ, ತ್ಯಾಗ ಹಾಗೂ ಆದರ್ಶಗಳನ್ನು ಯುವಜನತೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಗ್ರಂಥಾಲಯವು ಕೇವಲ ಪುಸ್ತಕಗಳ ಮನೆಯಲ್ಲ, ಸಂಸ್ಕಾರ ರೂಪಿಸುವ ಕೇಂದ್ರವೂ ಆಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಂಥಾಲಯ ಸಿಬ್ಬಂದಿ, ಓದುಗರು, ಎಸ್. ಕೇಶವ, ವೀರಭದ್ರಪ್ಪ, ಚಮನ್ ಸಾಬ್, ಮಹನೂರ್, ಕುಮಾರ್ ಸೇರಿದಂತೆ ಪುಟಾಣಿಗಳಾದ ಕುಮಾರಿ ಶ್ರೀಯಾ, ಆರ್ವಿ ಹಾಗೂ ಇತರರು ಉಪಸ್ಥಿತರಿದ್ದರು. ಮಹನೀಯರ ಜೀವನ ಹಾಗೂ ಸಂದೇಶಗಳ ಕುರಿತು ಚರ್ಚಿಸಲಾಯಿತು. ಇದೇ ಸಂದರ್ಭದಲ್ಲಿ ಗ್ರಂಥಾಲಯದಲ್ಲಿ ವಿಶೇಷ ಪುಸ್ತಕ ಪ್ರದರ್ಶನ ಏರ್ಪಡಿಸಲಾಗಿತ್ತು.

SAMALOCHANE RANEBENNURSUDDI KANNADA DAILY MORNING, OWNER, PUBLISHER BY: RAJESHWARI S OLEKAR, PUBLISHED FROM: H.NO, 58 MAIN ROAD, YAKALASAPUR, SUB DISTRICT RANEBENNUR, HAVERI, KARNATAKA-581115, PRINTED AT: VEDAMURTHY S T, GAYATHRI PUBLICATIONS, H.NO, 720, NEKAR COLONY, INDUSTRIAL AREA, HAVERI, KARNATAKA- 581115, EDITOR BY: RAJESHWARI S OLEKAR